ಒಳ್ಳೆಯವನಾಗಿದ್ದು ಹಾಗೂ ಒಳಿತನ್ನು ಮಾಡಿದರೆಂಬ ಒಂದೇ ಕಾರಣಕ್ಕಾಗಿ ಒಬ್ಬ ವ್ಯಕ್ತಿಯನ್ನು ಹಿಂಸಿಸಿ, ಕ್ಷೋಭಿಸಿ, ಅವಮಾನಿಸಿ, ಕರ್ತವ್ಯದಿಂದ ತೆಗೆದು ಹಾಕಿ, ಬಂಧಿಸಿ ಮತ್ತು ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡ ಒಬ್ಬ ಪ್ರಾಮಾಣಿಕ ವ್ಯಕ್ತಿಯ "ಸತ್ಯಕಥೆ".

# ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್

## ಸಂಸ್ಥೆಗೆ

## ನನ್ನ

## ನೇಮಕಾತಿ.

ದಿ:**10.03.1997** ರಂದು ಮೂಲತ: ಗುತ್ತಿಗೆ ಆಧಾರದ ಮೇರೆಗೆ ಹೆಚ್.ಎ.ಎಲ್ ನ ದುರಸ್ಥಿ ವಿಭಾಗದಲ್ಲಿ ನೇಮಕಗೊಂಡಿದೆ.

ನನ್ನ ನೇಮಕಾತಿಯ ನಂತರ, ಎಚ್.ಎ.ಎಲ್ ಆಡಳಿತ ಮಂಡಳಿಯು ದಿ:**05.05.1997** ರಂದು ನನ್ನ ಜಾತಿ ಪ್ರಮಾಣಪತ್ರವನ್ನು ಲಗತಿಸಿ ಮುಖ ಪತ್ರದೊಂದಿಗೆ ನನ್ನ ಜಾತಿಯ ನೈಜ್ಯತೆಯನ್ನು ಪರಿಶೀಲಿಸಲು ಮಾನ್ಯ ಜಿಲ್ಲಾ ದಂಡಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು (ದ) ಹಾಗೂ ಸದರಿಯವರೇ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯ (ಜಿ.ಜಾ.ಪ.ಸ) ಛೇರ್‌ಮೇನ್‌ರಾಗಿದ್ದು ಇವರಿಗೆ ಪತ್ರ ಬರೆಯಲಾಗಿತ್ತು.

(ಕೇಂದ್ರ ಸರ್ಕಾರದ ನಿಯಮಾನುಸಾರ, ಮೀಸಲಾತಿ ಹುದ್ದೆಗಳು ಅಂದರೆ, ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಹುದ್ದೆಗಳಿಗಾಗಿ ನೇಮಕಾತಿಗೆ ಮೊದಲು ವ್ಯಕ್ತಿಗಳ ಪೂರ್ವಾನ್ವಯ ಜಾತಿ ಪ್ರಮಾಣ ಪತ್ರದ ಪರಿಶೀಲನೆ ಪೂರ್ಣಗೊಳಿಸಬೇಕಾಗಿರುತ್ತದೆ.)

ಜಿಲ್ಲಾ ದಂಡಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು (ದ) ರವರಿಗೆ ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಜೂನ್ **1997** ರಿಂದ ಮಾರ್ಚ್ **1998** ವರಗೆ ಸತತವಾಗಿ 08 ಜ್ಞಾಪನಗಳನ್ನು ಎಚ್.ಎ.ಎಲ್‌ಯಿಂದ ಕಳುಹಿಸಲಾಗಿದೆ.

ಉಪಆಯುಕ್ತರು ಹಾಗೂ ಛೇರ್‌ಮನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ (ಜಿ.ಜಾ.ಪ.ಸ) ರವರು ತಮ್ಮ ವಿವರವಾದ ತನಿಖೆಯ ನಂತರ, ದಿ: **24.03.1998** ರಂದು ನನ್ನ ಜಾತಿಯು ಪರಿಶಿಷ್ಟ (ಆದಿ ದ್ರಾವಿಡ) ಎಂದು ಸಿಂಧುತ್ವ ಪ್ರಮಾಣ ಪತ್ರವನ್ನು ಎಚ್.ಎ.ಎಲ್ ಗೆ ಒದಗಿಸಿರುತ್ತಾರೆ.

ಸಿಂಧುತ್ವ ಪ್ರಮಾಣ ಪತ್ರವನ್ನು ಸ್ವೀಕರಿಸಿದ ನಂತರ ದಿ:**11.07.1998** ರಂದು ಎಚ್.ಎ.ಎಲ್‌ರವರು ಓವರ್‌ಹಾಲ್ ವಿಭಾಗದ ಗುಣಮಟ್ಟ ನಿಯಂತ್ರಣ ಇಲಾಖೆಯಲ್ಲಿ "ಇನ್ಸ್ಪೆಕ್ಟರ್" ಹುದ್ದೆಗೆ ನೇಮಕಾತಿ ಮಾಡುತ್ತಾರೆ.

# ಹಿಂದೂಸ್ಥಾನ್ ಏರೋನಾಟಿಕ್ಸ್ ನೌಕರರ ಸಂಘ
# (ಎಚ್.ಎ.ಇ.ಎ) ಚುನಾವಣೆ

**2001** ರಲ್ಲಿ ನಡೆಸಿದ ಹಿಂದೂಸ್ಥಾನ್ ಏರೋನಾಟಿಕ್ಸ್ ನೌಕರರ ಸಂಘದ (ಎಚ್.ಎ.ಇ.ಎ) ಚುನಾವಣೆಯಲ್ಲಿ ಸ್ಪರ್ಧಿಸಿ ಕಾರ್ಯಕಾರಿ ಸಮಿತಿಯ ಸದಸ್ಯ (ಇ.ಸಿ ಮೆಂಬರ್) ಆಯ್ಕೆಯಾದೆ ಮತ್ತು ಪುನ: **2005** ರ ಚುನಾವಣೆಯಲ್ಲಿ ಅದೇ ಹುದ್ದೆಗೆ ಸ್ಪರ್ಧಿಸಿ ಎರಡನೇ ಬಾರಿಯೂ ಸಹ ಆಯ್ಕೆಯಾದೆ.

**<u>ಎಚ್.ಎ.ಎಲ್ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರ ಮತ್ತು ಅಧಿಕಾರಿಗಳ ಸಂಘ ಚುನಾವಣೆ ಬೆಂಗಳೂರು</u>**

ದಿ: **11.06.2011** ರಲ್ಲಿ ಎಚ್.ಎ.ಎಲ್ ಆಡಳಿತವರ್ಗವು ಆಯೋಜಿಸಿದ ಎಚ್.ಎ.ಎಲ್ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರ ಮತ್ತು ಅಧಿಕಾರಿಗಳ ಸಂಘದ 09 (ಒಂಬತ್ತು) ಪದಾಧಿಕಾರಿಗಳು ಮತ್ತು ಇಪ್ಪತ್ತು ಮೂರು (23) ವಿಭಾಗೀಯ ಕಾರ್ಯದರ್ಶಿ ಹುದ್ದೆಗಾಗಿ ನಡೆಸಿದ ಚುನಾವಣೆಯಲ್ಲಿ 2011–16 ರ ಅವಧಿಗೆ ಸದರಿ ಸಂಘದ <u>"ಪ್ರಧಾನ ಕಾರ್ಯದರ್ಶಿಯಾಗಿ"</u> ನಾನು ಆಯ್ಕೆಗೊಂಡೆ.

ಎಚ್.ಎ.ಎಲ್‌ನಲ್ಲಿ ಸುಮಾರು 15000 ಒಟ್ಟಾರೆ ಸಂಖ್ಯಾಬಲವಿರುವುದು (10000 ನೌಕರರು ಮತ್ತು 5000 ಅಧಿಕಾರಿಗಳು) ಈ ಪೈಕಿ ಎಚ್.ಎ.ಎಲ್ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರು ಮತ್ತು ಅಧಿಕಾರಿಗಳ ಸಂಘವು 3600 ಸದಸ್ಯರನ್ನು ಹೊಂದಿರುತ್ತದೆ.

ಕೆಲವು ಪ್ರತಿಭಾನ್ವಿತರಿಂದ **1976**ರಲ್ಲಿ ಎಚ್.ಎ.ಎಲ್ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರು ಮತ್ತು ಅಧಿಕಾರಿಗಳ ಸಂಘವು ಸದಸ್ಯರ ಕಲ್ಯಾಣ ಮತ್ತು ಹಕ್ಕುಗಳಿಗಾಗಿ ಸ್ಥಾಪಸಲಾಯಿತು. ಸಂಘವು ಹಲವು ವರ್ಷಗಳಿಂದ ಅಸ್ತಿತ್ವದಲ್ಲಿದರೂ ಸಹ ಕೆಲವು ಸಮರ್ಪಣೀಯ ನಾಯಕರನ್ನು ಕಡೆಗಣಿಸಿ, ಹಲವು ಸ್ವಾರ್ಥ ಮತ್ತು ಭ್ರಷ್ಟ ನಾಯಕರ ಕಡೆಗಾಣಿಕೆಯಿಂದ ಯಾವುದೇ ನಿಗದಿತ ಗುರಿಯಿಲ್ಲದೇ ಕಾರ್ಯ ನಿರ್ವಹಿಸುತ್ತಿತ್ತು.

2011 ರ ಚುನಾವಣೆಯ ನಂತರ, ನನ್ನ ನಾಯಕತ್ವದ ಮೂಲಕ ಎಚ್.ಎ.ಎಲ್ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನೌಕರರ ಮತ್ತು ಅಧಿಕಾರಿಗಳ ಸಂಘದಲ್ಲಿ ಹಲವಾರು ಕಠಿಣ ಸಮಸ್ಯೆಗಳು ಹಾಗೂ ನೀತಿ – ನಿಯಾಮಗಳ ವಿಷಯಗಳನ್ನು ಪ್ರಸ್ಥಾಪಿಸಿ ಯಶಸ್ವಿಗೊಂಡಿದೆ. ಇದರಿಂದ ಸಂಘವು ಎಚ್.ಎ.ಎಲ್ ನಲ್ಲಿ ಉತ್ತುಂಗವನ್ನು ತಲುಪಲು ಸಾಧ್ಯವಾಯಿತ್ತು.

**ಎಚ್.ಎ.ಎಲ್ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನೌಕರರ ಮತ್ತು ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಪಾಲಿಸಿದ ಕ್ರಮ:**

1. ಅಧಿಕಾರಿಗಳ, ನೌಕರರ, ಹಾಗೂ ನಿಯತಕಾಲಿಕ ಮತ್ತು ಗುತ್ತಿಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಯಾವುದೇ ಜಾತಿ, ಮತ ಬಣ್ಣಭೇಧ ಭಾವಿಸದೇ ಪ್ರಾಮಾಣಿಕವಾಗಿ ನಿಸ್ವಾರ್ಥದಿಂದ ಶ್ರಮಿಸಿದ್ದೇನೆ.

2. ಎಷ್ಟೇ ಕಷ್ಟ ನೋವು ಅನುಭವಿಸಿದ್ದರೂ ಎಂದಿಗೂ ನನ್ನ ನಿಯಮಗಳ ವಿರುದ್ಧ ಸಮ್ಮತಿಸಿಲ್ಲ.

3. ನೀತಿ ಸಮಸ್ಯೆಗಳ ಕುರಿತು ಸೌಮ್ಯವಾಗಿ ಪರಿಶೀಲಿಸಿ, ಧೈರ್ಯದಿಂದ ಮಂಡಿಸಿ, ಯಾವುದೇ ರೀತಿಯ ಒಳ ಒಪ್ಪಂದವಿಲ್ಲದೇ ಸಮರ್ಪಕವಾಗಿ ಯಶಸ್ವಿಯಾಗಿ ಹೋರಾಡಿ ಸಮಸ್ಯೆಗಳನ್ನು ಪರಿಹರಿಸಿದ್ದೆನೆ.

4. ನನ್ನ ಸ್ವಾರ್ಥಕ್ಕಾಗಿ ಯಾರೊಬ್ಬರ ಮುಂದೆಯೂ ತಲೆ ಬಾಗಿರುವುದಿಲ್ಲ, ಕೈಗಳನ್ನು ಚಾಚಿರುವುದಿಲ್ಲ, ನನ್ನ ಗಳಿಕೆಗಾಗಿ ಎಂದಿಗೂ ನನ್ನ ಸಂಘವನ್ನು ಅಡವಿಟ್ಟುವಿರುದಿಲ್ಲ.

5. ನಾನು ನನ್ನೊಂದಿಗೆ ಚುನಾಯಿತ ಪ್ರತಿನಿಧಿಗಳು ಅಥವಾ ನನ್ನ ಸದಸ್ಯರುಗಳು ಸಂಘದ ನಿಯಮಗಳನ್ನು ತಪ್ಪಾಗಿ ಅಥವಾ ಅನಧಿಕೃತ ಕಾರ್ಯಾರ್ಕಕ್ಕಾಗಲೀ ಜನ ಸಾಮಾನ್ಯರಿಗೆ ತೊಂದರೆ ನೀಡುವುದಕ್ಕಾಗಲೀ ಹಾಗೂ ಎಸ್ಸಿ/ಎಸ್ಟಿ ದೌರ್ಜನ್ಯ ಕಾಯ್ದಿ ದುರ್ಬಳಕೆ ಮಾಡಲು ನಾನು ಎಂದೂ ಸಹಕರಿಸಿಲ್ಲ.

6. ನಾನು ಯಾವಾಗಲೂ ವೈಯಕ್ತಿಕ ವಿಷಯಗಳಿಗಿಂತ, ಬಹುಸಂಖ್ಯಾತ ವಿಷಯಗಳ ಬಗ್ಗೆ ಧ್ವನಿ ಎತ್ತಿರುತ್ತೇನೆ.

7. ಭ್ರಷ್ಟಾಚಾರವನ್ನು ತಡೆಯಲು ನಾನು ಎಂದಿಗೂ ಕರುಣೆಯನ್ನು ತೋರಿಸಿಲ್ಲ. ಈ ವಿಷಯ ಸಲುವಾಗಿ ಸಂಘದ ಚುನಾಯಿತ ಪ್ರತಿನಿಧಿಗಳ ವಿರುದ್ಧದ ದೂರು ಸಹಾ ನನ್ನ ಗಮನಕ್ಕೆ ಬಂದ ಪಕ್ಷದಲ್ಲಿ ಅದನ್ನು ಸಂಪೂರ್ಣವಾಗಿ ತಡೆಯಲು ಆಗದಿದ್ದರೂ, ಅದನ್ನು ಕನಿಷ್ಠ ಮಟ್ಟಕ್ಕೆ ತರುವಲ್ಲಿ ಯಶ್ವಸಿಯಾಗಿರುತ್ತೇನೆ.

8. ನಾನು ಸಕ್ರೀಯ ಆರ್.ಟಿ.ಐ ಕಾರ್ಯಕರ್ತನಾಗಿದು, ಎಚ್.ಎ.ಎಲ್ ಆಡಳಿತ ಮಂಡಳಿಯು ಹಲವಾರು ನೀತಿ–ನಿಯಾಮಗಳ ಮತ್ತು ಬಗ್ಗೆ ಕೇಂದ್ರ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದನ್ನು ಬಹಿರಂಗಪಡಿಸಿ ಅದರ ವಿರುದ್ಧ ಪ್ರತಿಭಟಿಸಿರುತ್ತೇನೆ.

9. ನಾನು ಏನೇ ಮಾಡಿದ್ದರೂ ಸಹ, ನನ್ನ ಸಂಸ್ಥೆಯ ಒಳಿತನ್ನು ಮಂಡಿಸುವಲ್ಲಿಗೆ ಸದಾ ಮುಂದಾಗಿದ್ದೆ.

10. ನಾನು ಯಾವುದೇ ಬ್ಯಾಂಕಿನಲ್ಲಿ ಠೇವಣಿಯಾಗಲೀ, ಅಕ್ರಮ ಹಣ, ಉಳಿಕೆ, ಮನೆ, ಸ್ಥಳ, ವಾಹನ, ಆಸ್ತಿಪಾಸ್ತಿ ಗಳಿಸಿರುವುದಿಲ್ಲ.

ನಾನು ನಿಸ್ವಾರ್ಥಿಯಾಗಿ ಹಾಗೂ ನಿಸ್ಸಾಹಯಕನಾಗಿ ಸಂವಿಧಾನದ ಉಲ್ಲಂಘನೆಯ ವಿರುದ್ದದ ಅನ್ಯಾಯ ಮತ್ತು ಭ್ರಷ್ಟಾಚಾರದೊಂದಿಗೆ ಹೋರಾಡುತ್ತಿರುವಾಗ, ನನನ್ನು ತಡೆಯಲು ವಿಫಲರಾಗಿ ನನ್ನ ಪಾರದರ್ಶಿತ ಕಾರ್ಯನಿರ್ವಹಣೆಯಿಂದ ಧಕ್ಕೆಗೊಂಡಿದ ಎಚ್.ಎ.ಎಲ್ ಎಸ್ಸಿ/ಎಸ್ಟಿ ನೌಕರರ ಮತ್ತು ಅಧಿಕಾರಿಗಳ ಸಂಘದ ಕೆಲವು ಚುನಾಯಿತ ಭ್ರಷ್ಟ ಪ್ರತಿನಿಧಿಗಳು ಹಾಗೂ ಎಚ್.ಎ.ಎಲ್‌ನ ಕೆಲವು ಭ್ರಷ್ಟ ಅಧಿಕಾರಿಗಳು ಮತ್ತು 2011 ರ ಸಂಘದ ಚುನಾವಣೆಯಲ್ಲಿ ಸೂತ ಕೆಲವು ಅಭ್ಯರ್ಥಿಗಳು ಎಲ್ಲಾರೂ ಸೇರಿ ಕೈಜೋಡಿಸಿ, ಒಬ್ಬರನೊಬ್ಬರೊಂದಿಗೆ ಘರ್ಷಣೆ ಮಾಡಿ ನನ್ನನ್ನು ಎಚ್.ಎ.ಎಲ್ ಸಂಸ್ಥೆಯಿಂದ ಹೊರಗೆಳೆಯಲು **"ಜಾತಿಯ ಪನರ್ ಪರಿಶೀಲನೆ"** ಎಂಬ ಮುಖವಾಡದೊಂದಿಗೆ ಹೀನ ಹಗರಣದ ಬಲೆ ಬೀಸಿದರು.

ಮುಂದುವರಿದು ಸದರಿರವರು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಮತ್ತು ನಾಗರೀಕ ಹಕ್ಕು ಜಾರಿ ನಿದೇಶನಾಲಯದ ಕೆಲವು ಭ್ರಷ್ಟ ಅಧಿಕಾರಿಳ ಜೋತೆ ಕೈ ಜೋಡಿಸಿ **"ಜಾತಿ ಪುನರ್ ಪರಿಶಿಲನೆ"** ಎಂಬ ಜಾಲವನ್ನು ಹರಡಲಾಯಿತು.

# “ಜಾತಿ ಪುನರ್‌ಪರಿಶೀಲನೆ” ಎಂಬ ಹಗರಣದ ಜಾಲ ಹೆಣೆದ ಬಗೆ.

ಸುಮಾರು **2012** (ಮಾಹೆ ಮತ್ತು ದಿನಾಂಕ ಮಾಹಿತಿ ಇರುವುದಿಲ್ಲ) ಶ್ರೀ.ಭೀಮರಾವ್ ನವಲೇಕರ್ ಎಂಬ ಹೆಸರಿನ ವ್ಯಕ್ತಿಯು ಲಿಖಿತ ಅರ್ಜಿಯಲ್ಲಿ ನನ್ನ ಜಾತಿಯ ಪರಿಶೀಲನೆ ಮಾಡುವಂತೆ ಎಚ್.ಎ.ಎಲ್ ಕೇಂದ್ರ ಕಛೇರಿಗೆ ಕೋರಿರುತ್ತಾರೆ. ದಿ:**19.03.2012** ರಂದು ಸದರಿ ಅರ್ಜಿಯನ್ನು ಮುಖ ಪತ್ರದೊಂದಿಗೆ ಪ್ರಧಾನ ವ್ಯವಸ್ಥಾಪಕರು ಮಾನವ ಸಂಪನ್ಮೂಲ (ಹೆಚ್.ಆರ್) ಇ.ಆರ್.ಎಂ, ಎಚ್.ಎ.ಎಲ್, ಪ್ರಧಾನ ಕಛೇರಿ ರವರು ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕರು (ಹೆಚ್.ಆರ್) ಬೆಂಗಳೂರೂ ಸಂಕೀರ್ಣ (ಬೆ.ಸಂ) ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಸದರಿ ಅರ್ಜಿಯನ್ನು ದಿ:**28.03.2012,** ಮುಖ್ಯ ವ್ಯವಸ್ಥಾಪಕರು (ಹೆಚ್.ಆರ್) ಬೆ.ಸಂ, ಮುಕ ಪತ್ರದೊಂದಿಗೆ ಮುಖ್ಯ ವ್ಯವಸ್ಥಾಪಕರು (ಹೆಚ್.ಆರ್) ದುರಸ್ಥಿ ವಿಭಾಗ ಅಂದರೆ, ನನ್ನ ಮಾತೃ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

**(ಜಾತಿ ಪರಿಶೀಲನೆಯ ಬಗ್ಗೆ ಸ್ವೀಕರಿಸಲಾದ ಪತ್ರವನ್ನು ಮುಖ್ಯ ವ್ಯವಸ್ಥಾಪಕರು (ಹೆಚ್.ಆರ್) ದುರಸ್ಥಿ ವಿಭಾಗ ರವರು ಸದರಿ ಪತ್ರದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಅಮಾನತ್ತಿನಲ್ಲಿ ಇರಿಸುತ್ತಾರೆ)**

ದಿ:**06.09.2012** ರಂದು 2011 ರ ಎಚ್.ಎ.ಎಲ್ ಎಸ್ಸಿ/ಎಸ್ಟಿ ಸಂಘದ ಚುನಾವಣೆಯಲ್ಲಿ ಸೋತ ಕೆಲವು ಅಭ್ಯರ್ಥಿಗಳಲ್ಲಿ ಒಬ್ಬರಾದ ಶ್ರೀ.ಧನರಾಜ್ ಮತ್ತು 08 ಇತರೆ ಸಿಬ್ಬಂದಿಗಳು, ನನ್ನ ಜಾತಿ ಪರಿಶೀಲನೆ ಮಾಡಲು ಕೋರಿ ಲಿಖಿತ ಮನವಿಯನ್ನು ಪ್ರಧಾನ ಜಾಗೃತ ಅಧಿಕಾರಿ, (ಸಿ.ವಿ.ಓ), ಎಚ್.ಎ.ಎಲ್ ಪ್ರಧಾನ ಕಛೇರಿ ರವರಿಗೆ ಸಲ್ಲಿಸಿರುತ್ತಾರೆ.

ಸದರಿ ಮನವಿಯನ್ನು ಸಲ್ಲಿಸುವಾಗ ಶ್ರೀ. ಧನರಾಜ್ ಮತ್ತು 08 ಇತರರು ತಮ್ಮ ಮನವಿಯೊಂದಿಗೆ (1)ನನ್ನ ತಂದೆ ಎಚ್.ಎ.ಎಲ್ ನ ಎ.ಆರ್.ಡಿ.ಸಿ ವಿಭಾಗದ ನಿವೃತ್ತ ನೌಕರ (2) ಎಚ್.ಎ.ಎಲ್ ದುರಸ್ಥಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನನ್ನ (3) ಏರ್‌ಕ್ರಾಫ್ಟ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನನ್ನ ಹಿರಿಯ ಸಹೋದರ ಮತ್ತು (4) ಎಚ್.ಎ.ಎಲ್ ಏರೋಇಂಜಿನ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ನನ್ನ ಕಿರಿಯ ಸಹೋದರ, ನಮ್ಮ ನಾಲ್ಕು ಜನರಿಗೆ ಸೇರಿದ 27 ಪುಟಗಳ **ಗೌಪ್ಯ ಸೇವಾ ದಾಖಲಾತಿಗಳನ್ನೂ** ಲಗತ್ತಿಸಿರುತ್ತಾರೆ.

(ಹೆಚ್.ಎ.ಎಲ್ ಪ್ರಾಧಾನ ಕಛೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಶ್ರೀ. ಧನರಾಜ್ ಮತ್ತು 08 ಇತರರು ನೀಡಿದ ದೂರು ಹಾಗೂ ಅದರ ಜೋತೆಗೆ ಲಗತಿಸಲಾದ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿರುವುದನ್ನು ಒಪ್ಪಿಕೊಂಡಿದರು ಸಹಾ, ಸದರ ದೂರು ಮತ್ತು ದಾಖಲಾತಿಗಳನ್ನು **ನಾನಗೆ ಮಾ.ಹ.ಕಾ ಅಡಿಯಲ್ಲಿ ನೀಡಲು ನೀರಾಕರಿಸುತ್ತಾರೆ.)**

ಸುಮಾರು ಆರು ತಿಂಗಳ ನಂತರ ದಿ: **17.09.2012** ರಂದು, ಭಾರತ ರತ್ನ ಬಾಬಾ ಸಾಹೇಬ ಅಂಬೇಡ್ಕರ್ ರವರ ಫೋಟೋವನ್ನು ಒಬ್ಬ ಕಾರ್ಮಿಕ ಕಾರ್ಖಾನೆಯ ಆವರಣದಲ್ಲಿ ಹಾಳು ಮಾಡಿದು ಮತ್ತು ಈ ವಿಷಯಕ್ಕೆ ಸಂಭದಿಂಸಿದಂತೆ 04 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸದಸ್ಯರನ್ನು ಕ್ಷುಲ್ಲಕ ಕಾರಣಕ್ಕಾಗಿ ಅಮಾನತ್ತು ಮಾಡಲಾಗಿ ಅದನ್ನು ಕಂಡಿಸಿ, ಎಚ್.ಎ.ಎಲ್ ಆಡಳಿತ ಮಂಡಳಿಯ ವಿರುದ್ದ ನನ್ನ ನೇತೃತ್ವದಲ್ಲಿ ಸುಮಾರು 2000 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರೊಂದಿಗೆ ಬೃಹತ್ ಪ್ರತಿಭಟನೆ ಮಾಡಲಾಯಿತು.

ಈ ಬೃಹತ್ ಹೋರಾಟದ ಪ್ರತಿಫಲವಾಗಿ ಎಚ್.ಎ.ಎಲ್ ಆಡಳಿತ ಮಂಡಳಿಯು ಸದರಿ 04 ನೌಕರರನ್ನು ಆ ದಿನವೇ ಅಮಾನತ್ತನ್ನು ಹಿಂಪಡೆಯಲಾಯಿತು.

ಹೋರಾಟದ ಪ್ರತಿಬಿಂಬದ ಹಿನ್ನೆಲೆಯಲ್ಲಿ, ದಿ:**24.09.2012** ರಂದು ಮುಖ್ಯ ವ್ಯವಸ್ಥಾಪಕರು (ಹೆಚ್.ಆರ್) ದುರಸ್ಥಿ ವಿಭಾಗ, ರವರು ಶ್ರೀ.ಭೀಮರಾವ್ ನವಲೇಕರ್ ರವರ ಅರ್ಜಿಯನ್ನು ನನ್ನ ಜಾತಿಯ ಬಗ್ಗೆ ಪರಿಶೀಲಿಸುವಂತೆ ಛೇರ್‌ಮನ್, ಕರ್ನಾಟಕ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜಾತಿ ಪರಿಶೀಲನಾ ಸಮಿತಿ ರವರಿಗೆ ಮುಖ ಪತ್ರದೊಂದಿಗೆ ಕಳುಹಿಸುತ್ತರೆ.

(1) ಮುಖ್ಯ ವ್ಯವಸ್ಥಾಪಕರು (ಹೆಚ್.ಆರ್) ದುರಸ್ಥಿ ವಿಭಾಗದವರು ಅರ್ಜಿಯನ್ನು ನಾನು **ಹೋರಾಟ ಕೈಗೊಂಡ ಸುಮಾರು 07 ದಿವಸಗಳ ನಂತರ ಮುಂದಿನ ಕ್ರಮಕ್ಕಾಗಿ ಏಕೆ ಸಲ್ಲಿಸಿದರು?**

(2) ದಿ:28.03.2012 ರಂದು ಶ್ರೀ.ಭೀಮರಾವ್ ನವಲೇಕರ್ ರವರಿಂದ ಸ್ವೀಕರಿಸಲಾದ ದೂರನ್ನು **ಯಾವುದೇ ಕ್ರಮ ಕೈಗೊಳ್ಳದೇ 06 ತಿಂಗಳವರೆಗೂ ಸದರಿ ರವರು ತಮ್ಮ ಅಧೀನದಲ್ಲಿಯೇ ಇರಿಸಿಕೊಂಡಿದ್ದೇಕೆ?**

(3) ಈ ದೂರನ್ನು ಮೂಂದಿನ ಕ್ರಮಕ್ಕಾಗಿ ಸಲ್ಲಿಸುವಾಗ, ಏತಕ್ಕಾಗಿ ಸದರಿರವರು, **ನಾನು ಈಗಾಗಲೇ ನನ್ನ ಜಾತಿ ಪರಿಶೀಲನೆಯಾಗಿ 1998 ರಲ್ಲೇ ಜಾತಿಯ ಸಿಂಧೂತ್ವ ಪ್ರಮಾಣ ಪತ್ರ ನೀಡಿರುವುದನ್ನು ಏಕೆ ಬಹಿರಂಗಮಾಡಲ್ಲಿಲ?**

(4) ಕೇಂದ್ರ ಸರ್ಕಾರದ ಸೂಚನೆಗಳನ್ವಯ ದೂರನ್ನು ಜಿಲ್ಲಾಜಾತಿ ಪರಿಶೀಲನಾ ಸಮಿತಿಗೆ ಸಲ್ಲಿಸದೇ **ಯಾವ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಪ.ಜಾ/ಪ.ಪಂ ಸಮಿತಿಗೆ ಸಲ್ಲಿಸಿದರು?**

ಅದೇ ದಿ: **24.09.2012** ರಂದು ಎಚ್.ಎ.ಎಲ್ ಎಸ್ಸಿ/ಎಸ್ಟಿ ಸಂಘದ 2011 ರ ಚುನಾವಣೆಯಲ್ಲಿ ಸೋತಿದ್ದ **ಶ್ರೀ.ಧನರಾಜ್ ಮತ್ತು 08 ಇತರರು** ಅದೇ ಛೇರ್‌ಮೇನ್, ಕರ್ನಾಟಕ ರಾಜ್ಯ, ಪ.ಜಾ/ಪ.ಪಂ ಸಮಿತಿ ರವರಿಗೆ ನನ್ನ ಜಾತಿಯ ಬಗ್ಗೆ ಪರಿಶೀಲಿಸುವಂತೆ ಪತ್ರವನ್ನು/ದೂರನ್ನು ರವಾನಿಸಿರುತ್ತಾರೆ. (ಸದರಿ ದೂರನ್ನು ಸುಮಾರು 02 ತಿಂಗಳ ಹಿಂದೆಯೇ ಅಂದರೇ ದಿ:05.07.2012 ರಂದು ನನ್ನ ವಿರುದ್ಧ ಅರ್ಜಿಯ ಕರಡು ಪ್ರತಿ ತಯಾರಿಸಿಲಾಗಿ ಸಹಿ ಮಾಡಿದರು)

(ಸದರಿ ದೂರನ್ನು ರವಾನಿಸುವಾಗ, ಈ ಹಿಂದೆ ಪ್ರಧಾನ ಜಾಗೃತ ಅಧಿಕಾರಿ, (ಸಿ.ವಿ.ಓ) ಎಚ್.ಎ.ಎಲ್ ಪ್ರ.ಕ.ಗೆ ದಿ: 06.09.2012 ರಂದು ನನ್ನ ಜಾತಿಯ ಪರಿಶೀಲನೆ ಕೋರಿ ರವಾನಿಸಿರುವ ಪತ್ರದೊಂದಿಗೆ ಸಲ್ಲಿಸಿಲಾದ **27 ಪುಟಗಳ ಗೌಪ್ಯ ಸೇವಾ ದಾಖಲಾತಿಗಳನ್ನು** ಮೇಲ್ಕಂಡ ದೂರಿನೊಂದಿಗೆ ಸಹ ಕಳುಹಿಸುತ್ತಿರುತ್ತಾರೆ/ ಲಗತ್ತಿಸಿರುತ್ತಾರೆ.)

ಅರ್ಜಿದಾರರು ಲಗತ್ತಿಸಿರುವ ದಾಖಲಾತಿಗಳು ಎಚ್.ಎ.ಎಲ್ ನ ನಾಲ್ಕು ವಿಭಿನ್ನ ವಿಭಾಗಗಳು ಅಂದರೆ (ಎ.ಆರ್.ಡಿ.ಸಿ, ಏರ್‌ಕ್ರಾಫ್ಟ್, ದುರಸ್ಥಿ ಮತ್ತು ಎರೋ ಇಂಜಿನ್) ಮಾನವ ಸಂಪನ್ಮೂಲ ವಿಭಾಗದ ಮೇಲಾಧಿಕಾರಿಗಳ ಬಳಿ ಸುರಕ್ಷಿತವಾಗಿ ಇರಿಸಲಾಗಿದ್ದು, ಕಛೇರಿ ರಹಸ್ಯ ಕಾಯ್ದೆ 1923 ರಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಚ್.ಎ.ಎಲ್ ಸಂಸ್ಥೆಯಿಂದ ಶ್ರೀ. ಧನರಾಜ್ ಮತ್ತು 08 ಇತರರು ನಮ್ಮ ಗೌಪ್ಯ ಸೇವಾ ದಾಖಲಾತಿಗಳನ್ನು ಹೇಗೆ ಪಡೆದುಕೊಂಡರು?

ಸದರಿ ದಾಖಲಾತಿಗಳನ್ನು ಯಾರಾದರೂ ಪಡೆದಿದ್ದಾರೆಯೇ ಎಂಬುದರ ಕುರಿತು ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ನಾನು ಮತ್ತು ನನ್ನ ಸಹೋದರರು ಕೋರಲಾಗಿ, ಎಚ್.ಎ.ಎಲ್ ಸಂಸ್ಥೆಯು ಪ್ರತ್ಯುತ್ತುರವಾಗಿ "ಮೇಲ್ಕಂಡ ದಾಖಲಾತಿಗಳನ್ನು ಯಾರೂ ಎಚ್.ಎ.ಎಲ್ ಸಂಸ್ಥೆಯನು ಕೇಳಿರುವುದಿಲ್ಲ ಹಾಗೂ ಯಾರಿಗೂ ಎಚ್.ಎ.ಎಲ್ ಸಂಸ್ಥೆಯು ನೀಎಇರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಕರಣ ಹೀಗಿರುವಾಗ,

ನಾಲ್ಕು ವಿಭಿನ್ನ ವಿಭಾಗಗಳ (ಎ.ಆರ್.ಡಿ.ಸಿ, ಏರ್‌ಕ್ರಾಫ್ಟ್, ದುರಸ್ಥಿ ಮತ್ತು ಎರೋ ಇಂಜಿನ್) ಮಾನವ ಸಂಪನ್ಮೂಲದ ಮೇಲಾಧಿಕಾರಿಗಳ ಭದ್ರತಾ ಅಧೀನದಲ್ಲಿರುವ **ಗೌಪ್ಯ ಸೇವಾ ದಾಖಲಾತಿಗಳನ್ನು ಶ್ರೀ. ಧನರಾಜ್ ಮತ್ತು 08 ಇತರರು ಕದ್ದೊಯ್ದರೇ?**

**ಅಥವಾ**

ನನ್ನನ್ನು ಪ್ರಕರಣದಲ್ಲಿ ಸಿಲುಕಿಸಲು/ದೋಷಿಯಾಗಿ ಮಾಡಲು ನಾಲ್ಕು ವಿಭಿನ್ನ ವಿಭಾಗಗಳ (ಎ.ಆರ್.ಡಿ.ಸಿ, ಏರ್‌ಕ್ರಾಫ್ಟ್, ದುರಸ್ಥಿ ಮತ್ತು ಎರೋ ಇಂಜಿನ್) ಮಾನವ ಸಂಪನ್ಮೂಲ **ಮೇಲಾಧಿಕಾರಿಗಳೇ ಶ್ರೀ. ಧನರಾಜ್ ಮತ್ತು 08 ಇತರರಿಗೆ ಸ್ವತ: ನೀಡಿದರೇ?**

**ಇದು ಕೇವಲ ಸಂಪೂರ್ಣ ತನಿಖೆಯಿಂದ ಮಾತ್ರ ಬಹಿರಂಗವಗುತ್ತದೆ.**

| **ಶ್ರೀ. ಧನರಾಜ್ ಮತ್ತು 08 ಇತರರು ಕರ್ನಾಟಕ ಎಸ್ಸಿ/ಎಸ್ಟಿ ಆಯೋಗಕ್ಕೆ ನೀಡಿದ ದೂರು** | **ಹೆಚ್.ಎ.ಎಲ್ರವರು ಕರ್ನಾಟಕ ಎಸ್ಸಿ/ಎಸ್ಟಿ ಆಯೋಗಕ್ಕೆ ನೀಡಿದ ದೂರು** |
| --- | --- |

ದಿ: 24.09.2012

| | |
| --- | --- |
| ನನ್ನ ವಿರುದ್ಧ ಅರ್ಜಿಯ ಕರಡು ಪ್ರತಿ ತಯಾರಿಸಿಲಾಗಿ ಸಹಿ ಮಾಡಿದ ದೂರನ್ನು ಸುಮಾರು 02 ತಿಂಗಳ ನಂತರ ಅಂದರೇ ದಿ:24.09.2012 ರಂದು ಶ್ರೀ. ಧನರಾಜ್ ಮತ್ತು 08 ಇತರರು ಕರ್ನಾಟಕ ಎಸ್ಸಿ/ಎಸ್ಟಿ ಆಯೋಗಕ್ಕೆ ಖುದ್ದಾಗಿ ನೀಡುತ್ತರೆ. | ಭೀಮಾರಾವ್ ನವಲೇಕರ ರವರ ಅರ್ಜಿಯನ್ನು ಸ್ವೀಕರಿಸಿದ ಸುಮಾರು ಆರು ತಿಂಗಳ ನಂತರ, ಮುಖ್ಯ ವ್ಯವಸ್ಥಪಕರು (ಮಾ.ಸಂ) ದುರಸ್ಥಿ ವಿಭಾಗ, ಎಚ್.ಎ.ಎಲ್ ರವರು ಅದೇ ದಿನ ದಿ: 24.09.2012 ರಂದು ದೂರನ್ನು ಮುಂದಿನ ಕ್ರಮಕ್ಕಾಗಿ ಅದೇ ಕರ್ನಾಟಕ ಎಸ್ಸಿ/ಎಸ್ಟಿ ಆಯೋಗಕ್ಕೆ ರವಾನಿಸಿರುತ್ತಾರೆ. |

**ಯಾವ ಕಾರಣಕ್ಕಾಗಿ ಶ್ರೀ. ಧನರಾಜ್ ಮತ್ತು 08 ಇತರರು ಹಾಗೂ ಮುಖ್ಯ ವ್ಯವಸ್ಥಪಕರು (ಹೆಚ್.ಆರ್) ದುರಸ್ಥಿ ವಿಭಾಗ, ಎಚ್.ಎ.ಎಲ್ ಇವರಿಬ್ಬರು ನನ್ನ ಜಾತಿ ಪರಿಶೀಲನೆ ಕುರಿತು ದೂರನ್ನು ತಿಂಗಳುಗಳ ಕಾಲ ಏಕೆ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು ಹಾಗೂ ಇವರಿಬ್ಬರೂ ಶಾಮೀಲಾಗಿ ಒಂದೇ ದಿನ ಅಂದರೆ ದಿ:24.09.2012 ರಂದೇ ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಆಯೋಗಕ್ಕೆ ಏಕೆ ನೀಡುತ್ತಾರೆ?**

**ಎಚ್.ಎ.ಎಲ್ ಸಂಸ್ಥೆಯ ಅಂತರ್ ಜಾಲದಲ್ಲಿ "ವಿಸ್ಲೆಬ್ಲೌರ್" ನೀತಿಗಳ ಕುರಿತು ವಿವರಣೆ ನೀಡಲಾಗಿದೆ.**

**ಮುನ್ನುಡಿ**

ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಸಂಸ್ಥೆಯು ಅನೈತಿಕ ನಡವಳಿಕೆ, ನೈಜ್ಯ ಅಥವಾ ಅನುಮಾನಾಸ್ಪದ ವಂಚನೆ ಅಥವಾ ಸಂಸ್ಥೆಯ ಸಾಮಾನ್ಯ ಮಾರ್ಗಸೂಚಿಗಳು ನೀತಿ–ನಿಯಾಮದ ಬಗ್ಗೆ ಆಡಳಿತವರ್ಗ ವರದಿ ಮಾಡಲು ಯಾಂತ್ರಿಕ ವ್ಯವಸ್ಥೆಯನ್ನು ಸ್ಥಾಪಿಸುವ ಸಲುವಾಗಿ **"ವಿಸಿಲ್ ಬ್ಲೋವರ್"** ಪಾಲಿಸಿಯನ್ನು ಪ್ರಸ್ತಾಪಿಸಬಹುದು.

**ರಕ್ಷಣೆ**

**29 )**ಈ ಪಾಲಿಸಿಯ ಅಡಿಯಲ್ಲಿ ಸಂರಕ್ಷಿತ ಪ್ರಕಟಣೆಯನ್ನು ವರದಿ ಮಾಡಿದ್ದರಿಂದ "ವಿಸಿಲ್ ಬ್ಲೋವರ್" ಗೆ ತೊಂದರೆ ನೀಡಬಾರದು.

**30)** ಮಾರ್ಗದರ್ಶಿ ಸೂತ್ರಗಳ ಪ್ರಕಾರ ಸಂಸ್ಥೆಯು ಯಾವುದೇ ರೀತಿಯ ತಾರತಮ್ಯ, ಕಿರುಕುಲ, ಹಿಂಸೆಯನ್ನು ಅಥವಾ ಯಾವುದೇ ಅನ್ಯಾಯವಾದ ಉದ್ಯೋಗದ ಅಭ್ಯಾಸವನ್ನು "ವಿಸಿಲ್ ಬ್ಲೋವರ್" ಗೆ ನೀಡಲು ಖಂಡಿಸುತ್ತದೆ. ಆದ್ದರಿಂದ ಸಂಪೂರ್ಣ ರಕ್ಷಣೆ ನೀಡಿ, ಪ್ರತೀಕಾರ, ಬೆದರಿಕೆ ಅಥವಾ ಅಂತಹ ಶಿಸ್ತಿನ ಕ್ರಮ, ವರ್ಗಾವಣೆ, ಪ್ರಚಾರದ ನಿರಾಕರಣೆ ಅಥವಾ ವಿಸಿಲ್ ಬ್ಲೋವರ್ ನ ಬಲವನ್ನು ತಡೆಯಲು ಯಾವುದೇ ನೇರ ಅಥವಾ ಪರೋಕ್ಷ ಬಳಕೆಯ ಅಧಿಕಾರವನ್ನು ಒಳಗೊಂಡಂತೆ ಯಾವುದೇ ಅನ್ಯಾಯದ ಅಭ್ಯಾಸಗಳನ್ನು "ವಿಸಿಲ್ ಬ್ಲೋವರ್" ಗೆ ವಿರುದ್ಧ ನೀಡಬಾರದು ಅಥವಾ ಸೇವೆಯ ಅಮಾನತು, ಶಸ್ತುಕ್ರಮ ಹಾಗೂ "ವಿಸಿಲ್ ಬ್ಲೋವರ್" ನ ಹಕ್ಕನ್ನು ತಡೆಯಲು ಸಂರಕ್ಷತ ಪ್ರಕಟಣೆಯನ್ನು ಮಾಡುವ ಪರಿಣಾಮವಾಗಿ "ವಿಸಿಲ್ ಬ್ಲೋವರ್" ಅನುಭವಿಸಬಹುದಾದ ತೊಂದರೆಗಳನ್ನು ಕಡಿಮೆಗೊಳಿಸಲು ಸಂಸ್ಥೆಯು ಕ್ರಮಗಳನ್ನು ತೆಗೆದಕೊಳ್ಳಬೇಕು ಮತ್ತು ಸಂರಕ್ಷಿತ ಬಹಿರಂಗಪಡಿಸುವಿಕೆಯನ್ನೂ ಒಳಗೊಂಡಂತೆ ತನ್ನ ಕರ್ತವ್ಯಗಳನ್ನು / ಕಾರ್ಯಗಳನ್ನು ನಿರ್ವಹಿಸಲು ಮುಂದುವರೆಯಲು ವಾತಾವರ್ಣವನ್ನು ಸೃಷ್ಟಿಸಬೇಕು.

ನಾನು ನೇಮಕಾತಿ ಹಾಗೂ ಮುಂಬಡಿಯಲ್ಲಿ ಮೀಸಲಾತ್ತಿಯ ಉಲ್ಲಂಘನೆ, ಎಚ್.ಎ.ಎಲ್ ಶಾಲೆಗಳಲ್ಲಿ ದಾಖಲಾತಿ ವಿಷಯಗಳ ಹಾಗೂ ದಿನಗೂಲಿ ಮತ್ತು ಗುತ್ತಿಗೆ ಕಾರ್ಮಿಕರ ವಿಷಯ, ಅನುಕಂಪದ ಆಧಾರದ ನೇಮಕಾತಿ, ವಸತಿ ಗೃಹ ಹಂಚಿಕೆ ಇನ್ನೂ ಹಲವಾರು ಉಲ್ಲಂಘನೆಗಳ ಕುರಿತು ಸಕ್ರೀಯ ಆರ್.ಟಿ.ಐ ಕಾರ್ಯಕರ್ತನಾಗಿ ಹೋರಾಡುತ್ತಿರುವಾಗ, ನನ್ನನ್ನು "ವಿಸಿಲ್ ಬ್ಲೋವರ್" ನೀತಿಯ ಅಡಿಯಲ್ಲಿ ಉಲ್ಲೇಖಿಸಿರುವಂತೆ ಎಚ್.ಎ.ಎಲ್ ಆಡಳಿತ ಮಂಡಳಿಯು **"ವಿಸಿಲ್ ಬ್ಲೋವರ್"** ನೀತಿಗಳ ನಿಯಮಾವಳಿಯ ಅಡಿಯಲ್ಲಿ ಭದ್ರತೆನ 'ಒದಗಿಸು ಅರಿವಿದ್ದು ಸಹ ನನ್ನ ರಕ್ಷಣೆಯ ಖಾತರಿಪಡಿಸುವ ಬದಲು ನನನ್ನು ಹಿಂಸಿಸಿ, ದೋಷಿಯನ್ನಾಗಿ ಏಕೆ ನಿಲ್ಲಿಸಿದರೆಂಬುದು ಪ್ರಶ್ನಾರ್ಥಕವಾಗಿದೆ?

ದಿ: 19.11.2012 ರಂದು ಶ್ರೀ.ಧನರಾಜ್ ಮತ್ತು 08 ಇತರರು ಸಲ್ಲಿಸಿರುವ ದೂರಿನ ಕುರಿತು ಕ್ರಮ ಕೈಗೊಳ್ಳುವಂತೆ ಮಾ.ಸಂ ಎಚ್.ಎ.ಎಲ್, ಪ್ರದಾನ ಕಛೇರಿ ರವರು 27 ಪ್ರತಿಯುಳ್ಳ ದೂರನ್ನು ಹೆಚ್ಚುವರಿ ಮಹಾ ವ್ಯವಸ್ಥಾಪಕರು (ಮಾ.ಸಂ) ಬೆಂಗಳೂರು ಸಂಕೀರ್ಣ ರವರಿಗೆಮುಕ ಪತ್ರದೊದಿಗೆ ರವಾನಿಸಿರುತ್ತಾರೆ.

ಸದರಿ ದೂರನ್ನು ದಿ: **13.12.2012** ರಂದು ಭದ್ರತೆ ಇಲಾಖೆ ಎಚ್.ಎ.ಎಲ್ ಬೆಂಗಳೂರು ಸಂಕೀರ್ಣ ರವರಿಗೆ ದೂರುನ ಕುರಿತು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

(ಮೇಲ್ಕಂಡ ಎಲ್ಲಾವು ನನ್ನ ಜಾತಿ ಪರಿಶೀಲನೆ ಕುರಿತು ಶ್ರೀ.ಧನರಾಜ್ ಮತ್ತು 08 ಇತರರು ದಿ: 06.09.2012 ರಂದು ಪ್ರಧಾನ ಜಾಗ್ರತ ಅಧಿಕಾರಿ, (ಸಿ.ವಿ.ಒ) ಎಚ್.ಎ.ಎಲ್, ಪ್ರಧಾನ ಕಛೇರಿ ರವರಿಗೆ ನೀಡಿದ ದೂರಿನ ಆಧಾರದ ಮೇರೆಗೆ ನಡೆದ ಪ್ರಕ್ರೀಯೆಗಳು)

ಮುಖ್ಯ ವ್ಯವಸ್ಥಾಪಕರು (ಮಾ.ಸಂ) ದುರಸ್ಥಿ ವಿಭಾಗ, ಎಚ್.ಎ.ಎಲ್ ಮತ್ತು ಶ್ರೀ.ಧನರಾಜ್ ಮತ್ತು 08 ಇತರರು ದಿ: 24.09.2012 ರಂದು ರವಾನಿಸಲಾಗಿರುವ ಪತ್ರಗಳ ಆಧಾರದ ಮೇಲೆ ಕಾರ್ಯದರ್ಶಿ, ಕರ್ನಾಟಕ ರಾಜ್ಯಖೈಸ್ಸಿ/ಎಸ್ಟಿ ಆಯೋಗ ದಿ: **18.12.2012** ರಂದು ದೂರಿನ ಪ್ರತಿಗಳನ್ನು ಮುಕ ಪತ್ರದೊದಿಗೆ ಲಗತ್ತಿಸಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಲಯ (ನಾ.ಹ.ಜಾ.ನಿ) ಹಾಗೂ ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ (ಜಿ.ಜಾ.ಪ.ಸ) ಬೆಂಗಳೂರು ರವರಿಗೆ ನನ್ನ ಜಾತಿಯ ಬಗ್ಗೆ ವಿವರವಾದ ತನಿಖೆಯನ್ನು ನಡೆಸುವಂತೆ ಕೋರಿರುತ್ತಾರೆ.

ಪೊಲೀಸ್ ಉಪಾಧೀಕ್ಷಕರು, (ನಾ.ಹ.ಜಾ.ನಿ) ಬೆಂಗಳೂರು ರವರು ನನಗೆ ದಿ: **15.02.2013** ರಂದು ಜ್ಞಾಪನ/ಸೂಚನೆ ಜಾರಿ ಮಾಡಿ ಅದರಲ್ಲಿ ಮುಖ್ಯ ವ್ಯವಸ್ಥಾಪಕರು, ಎಚ್.ಎಎಲ್ ರವರು ನಿಮ್ಮ ಜಾತಿಯ ಕುರಿತು ಪರಿಶೀಲಿಸುವಂತೆ ಕೋರಿರುವ ಮೇರೆಗೆ ದಿ: 23.02.2013 ರಂದು ಬೆಳಿಗ್ಗೆ 11:00 ಗಂಟೆಗೆ ತನಿಖೆಗಾಗಿ ಹಾಜರಾಗುವಂತೆ ತಪ್ಪಿದ್ದಲ್ಲಿ ಎಸ್ಸಿ/ಎಸ್ಟಿ ಕಾಯ್ದೆ 1989 ರನ್ವಯ ಸೂಕ್ತ ಕಾನೂನು ರೀತ್ಯ ಕ್ರಮ ಜರುಗಿಸುವುದಾಗಿ ಸೂಚಿಸಿರುತ್ತಾರೆ. ಅದೇ ರೀತಿ ದಿ: 06.03.2013 ರಂದು ಪುನ: ಸೂಚನಾ ಪತ್ರ ಕಳುಹಿಸಲಾಯಿತು.

(ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಆಯೋಗ ರವರು ದಿ: 18.12.2012 ರಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ, (ನಾ.ಹ.ಜಾ.ನಿ)ರವರಿಗೆ ನನ್ನ ಜಾತಿಯ ಪರಿಶೀಲನೆ ಕುರಿತು ಸಲ್ಲಿಸಲಾದ ಅರ್ಜಿಯ ದೂರಿನ ಆಧಾರದ ಮೇರೆಗೆ ಪೊಲೀಸ್ ಉಪಾಧೀಕ್ಷಕರು,(ನಾ.ಹ.ಜಾ.ನಿ), ರವರು ಈ ಮೇಲ್ಕಂಡ ಸೂಚನೆಯನ್ನು ನೀಡಿರುತ್ತಾರೆ)

ಕಾರ್ಯದರ್ಶಿ, ಜಿಲ್ಲಾ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು ರವರು **ದಿ: 21.02.2013** ರಂದು ನನಗೆ ಸಿಂಧುತ್ವ ಪ್ರಮಾಣ ಪಡೆಯುವ ಸಲುವಾಗಿ ಕೆಲವು ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚನೆಯನ್ನು ನೀಡುತ್ತಾರೆ. ಮುಂದಿನ ದಿನಗಳಲ್ಲಿ ಇದೇ ರೀತಿಯ ಸುಮಾರು 06 ಜ್ಞಾಪನಗಳನ್ನು ನೀಡುತ್ತಾರೆ.

(ಈ ಸೂಚನೆಯು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಆಯೋಗ ದಿ: 18.12.2012 ರಂದು ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ, ಬೆಂಗಳೂರು ರವರಿಗೆ ನನ್ನ ಜಾತಿಯ ಪರಿಶೀಲನೆ ಕುರಿತು ತನಿಖೆ ನಡೆಸುವಂತೆ ಕೋರಿರುವ ಆಧಾರದ ಮೇರೆಗೆ ಹೊರಡಿಸಲಾಗಿದೆ).

ಕಾರ್ಯದರ್ಶಿಗಳು, ಜಿಲ್ಲಾ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು ರವರು ನನ್ನ ಸಿಂಧುತ್ವ ಪ್ರಮಾಣ ಪತ್ರವನ್ನು ಈಗಾಗಲೇ ಜಾರಿ ಮಾಡಿ ಹಾಗೂ ಅದನ್ನು ನನ್ನ ನೇಮಕಾತಿಯ ಸಂಬಂದ 1998 ರಲ್ಲೇ ಎಚ್.ಎ.ಎಲ್ ಸಂಸ್ಥೆಗೆ ಸಲ್ಲಿಸಿರುವಾಗ ಪುನ: ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯುವಂತ್ತೆ ಮರು ಸೂಚನೆಗಳನ್ನು ನೀಡುತ್ತಿರುವುದು ಪ್ರಶ್ನಾರ್ಥಕವಾಗಿದೆ?

**27.02.2013** ರಂದು ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತವಾರ್ತೆ ವಿಭಾಗ, ಎಚ್.ಎ.ಎಲ್ ರವರು ನನ್ನ ಜಾತಿಯ ಕುರಿತು ಪರಿಶೀಲನೆ ಕೈಗೊಂಡ ವರದಿಯನ್ನು ಉಪ ಮಹಾ ವ್ಯವಸ್ಥಾಪಕರು, (ಭದ್ರತೆ ಮತ್ತು ಅಗ್ನಿ)ರವರು ಮುಖ್ಯ ವ್ಯವಸ್ಥಾಪಕರು (ಮಾ.ಸಂ)ಬೆಂಗಳೂರು ಸಂಕೀರ್ಣ ರವರಿಗೆ ನೀಡತ್ತಾರೆ. ತಡವಾಗಿ ಈ ವರದಿಯನ್ನು ಹೆಚ್ಚುವರಿ ಮಹಾವ್ಯವಸ್ಥಾಪಕರು (ಮಾ.ಸಂ) ಎಚ್.ಎ.ಎಲ್ ಪ್ರಧಾನ ಕಛೇರಿ ರವರಿಗೆ ದಿ: **21.03.2013** ರಂದು ರವಾನಿಸುತ್ತಾರೆ.

(ಮೇಲ್ಕಂಡ ಎಲ್ಲಾವು ನನ್ನ ಜಾತಿ ಪರಿಶೀಲನೆ ಕುರಿತು ಶ್ರೀ.ಧನರಾಜ್ ಮತ್ತು 08 ಇತರರು ದಿ: 06.09.2012 ರಂದು ಪ್ರಧಾನ ಜಾಗ್ರತ ಅಧಿಕಾರಿ, (ಸಿ.ವಿ.ಒ) ಎಚ್.ಎ.ಎಲ್, ಪ್ರಧಾನ ಕಛೇರಿ ರವರಿಗೆ ನೀಡಿದ ದೂರಿನ ಆಧಾರದ ಮೇರೆಗೆ ನಡೆದ ಪ್ರಕ್ರೀಯೆಗಳು)

ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತವಾರ್ತೆ ವಿಭಾಗ ರವರು ಉಲ್ಲೇಖೀಸಿರುವ ತನಿಖಾ ವರದಿಯ ಅಂಶಗಳು ಈ ಕೆಳಗಿನಂತಿವೆ;

1) ದಿ: 24.03.1998 ರಂದು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ, ಬೆಂಗಳೂರು ರವರು ಶ್ರೀ.ಆರ್.ಬಲ ಸರವಣ ಕುಮಾರ ರವರಿಗೆ ಸಿಂಧುತ್ವ ಪ್ರಮಾಣ ಪತ್ರ ನೀಡಲಾಗಿ ಅದರಲ್ಲಿ ಶ್ರೀ.ಆರ್.ಬಾಲ ಸರವಣ ಕುಮಾರ ಎಂಬುವರು ಪರಿಶಿಷ್ಟ ಜಾತಿ (ಆದಿ ದ್ರಾವಿಡ) ಸೇರಿದವರಾಗಿದ್ದು, ಎಂದು ಪರಿಗಣಿಸಲ್ಪಟ್ಟಿದೆ.

2) ಎಚ್.ಎ.ಎಲ್ ದುರಸ್ಥಿ ವಿಭಾಗ, ಬೆಂ.ಸಂ.ದಲ್ಲಿ ಶ್ರೀ.ಆರ್.ಬಾಲ ಸರವಣ ಕುಮಾರ ರವರಿಗೆ ಮೀಸಲಾತಿ ಅಡಿಯಲ್ಲಿ ನೇಮಕಾತಿಗೊಂಡು, ಬೇಡಿಕೆಯಾನುಸಾರ, ಸದರಿಯವರು ತಮ್ಮ ಜಾತಿ ಪ್ರಮಾ ಪತ್ರ & ಸಿಂಧುತ್ವ ಪ್ರಮಾಣ ಪತ್ರವನ್ನು ಒದಗಿಸಿರುತ್ತಾರೆ.

**3) ದೂರುದಾರ ಶ್ರೀ.ದನರಾಜ್ ಮತ್ತು 08 ಇತರರು ಸಹ ಎಚ್.ಎ.ಎಲ್ ಸಂಸ್ಥೆಯಲ್ಲಿ ಕಾಮಿಕರಾಗಿದ್ದು, ಎಸ್ಸಿ/ಎಸ್ಟಿ ಜನಾಂಘಕ್ಕೆ ಸೇರಿದವರಾಗಿರುತ್ತಾರೆ. ಒಂದು ವೇಳೆ ದೂರುದಾರು ಶ್ರೀ.ಆರ್.ಬಲ ಸರವಣ ಕುಮಾರ ರವರ ಜಾತಿಯ ಕುರಿತು ಯಾವುದೇ ಅನುಮಾನ / ದೂರು ಇದ್ದಲ್ಲಿ ಮಾನ್ಯ ನ್ಯಾಯಾಲಯವನ್ನು ಸಂಪರ್ಕಿಸಿ, ಸಂವಿಧಾನಾತ್ಮಕವಾಗಿ, ಪ್ರಕರಣ ದಾಖಲಿಸಿ, ಇತ್ಯರ್ಥ ಗೊಳಿಸಕೊಳ್ಳಬಹುದಾಗಿರುತ್ತದೆ.**

**4)** ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿ: 02.09.1994 ರಂದು ಕು.ಮಾಧುರಿ ಪಾಟೀಲ್ V/s ಹೆಚ್ಚುವರಿ ಆಯುಕ್ತರು ರವರ ಪ್ರಕರಣದಲ್ಲಿ (1995 AIR 94, 1994 Sec (6) 241) ನೀಡಿರುವ ತೀರ್ಪಿನಲ್ಲಿ **ಜಾತಿ ಪರಿಶೀಲನಾ ಸಮಿತಿಯು ಕೈಗೊಂಡ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ರೀತಿಯ ಪ್ರಕರಣವಾಗಲೀ ಅಥವಾ ನಡವಳಿಗಳನ್ನಾಗಲೀ ಯಾವುದೇ ಪ್ರಾಧಿಕಾರದ ಮುಂದೆ ತರುವಂತಿಲ್ಲ.**

ಈಗಾಗಲೇ ತಿಳಿದಿರುವಂತೆ ಶ್ರೀ.ಧನರಜ್ ಮತ್ತು 08 ಇತರರು ಪ್ರಧಾನ ಜಾಗ್ರತ ಅಧಿಕಾರಿ, ಎಚ್.ಎ.ಎಲ್ ಪ್ರದಾನ ಕಛೇರಿ ರವರಿಗೆ ನನ್ನ ಮತ್ತು ನನ್ನ ಸಹೋದರರಿಗೆ ಸೇರಿದ **27 ಪುಟಗಳ ಗೌಪ್ಯ ಸೇವಾ ದಾಖಲಾತಿಗಳ** ಪ್ರತಿಯುಳ್ಳ ಲಿಖಿತ ದೂರನ್ನು ನನ್ನ ಜಾತಿ ಪರಿಶೀಲನೆ ಮಾಡಲು ಕೋರಿ ನೀಡಿರುವುದು ತಿಳಿದಿರುವ ಅಂಶವೇ. ಈ ಸ್ವೀಕರಿಸಿಲಾಗಿರುವ ದೂರು ಹಾಗೂ ಗೌಪ್ಯ ಸೇವಾ ದಾಖಲಾತಿಗಳನ್ನು ಎಚ್.ಎ.ಎಲ್ ನ ಪ್ರಧಾನ ಕಛೇರಿ ಹಾಗೂ ಬೆಂಗಳೂರು ಸಂಕೀರ್ಣ ಕ್ಕೆ ಸೇರಿದ ಹಲವಾರು ಹಿರಿಯ ಅಧಿಕಾರಿಗಳು ಪತ್ರವನ್ನು ಸ್ವೀಕರಿಸಿ ಮುಂದಿನ ಕ್ರಮಕ್ಕಾಗಿ ಸದರಿ ಪತ್ರವನ್ನು ರವಾನಿಸಿರುತ್ತರೆ.

ಪ್ರಕರಣವು ಹೀಗಿರುವಾಗ,

1) ನಾಲ್ಕು ವಿಭಿನ್ನ ವಿಭಾಗಗಳ ಮಾನವ ಸಂಪನ್ಮೂಲದ ಭದ್ರತಾ ಅಧೀನದಲ್ಲಿ ಇರಬೇಕಾಗಿದ ಈ ಎಲ್ಲಾ ಗೌಪ್ಯ ಸೇವಾ ದಾಖಲಾತಿಗಳು ಶ್ರೀ.ಧನರಾಜ್ ಮತ್ತು 08 ಇತರರ ಸ್ವಾಧೀನಕ್ಕೆ ಹೇಗೆ ಸೇರಿತ್ತು ಎಂದು **ಎಚ್.ಎ.ಎಲ್ ನ ಪ್ರಧಾನ ಕಛೇರಿ ಹಾಗೂ ಬೆಂಗಳೂರು ಸಂಕೀರ್ಣದ ಯಾವ್ರೋಬ್ಬ ಅಧಿಕಾರಿಯು ಏಕೆ ಪ್ರಶ್ನಿಸಿಲಿಲ್ಲ?**

2) ಮಾಧ್ಯಮ ಆಡಳಿತವರ್ಗದಲ್ಲಿರುವ ಅಧಿಕಾರಿ ಅಂದರೆ, ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತ ವಿಭಾಗ ರವರಿಗೆ ಜಾತಿ ವಿಚಾರಣೆ ನಡೆಸಿ, ಸಿಂಧುತ್ವ ಪ್ರಾಮಾಣ ಪತ್ರ ಪಡೆದಿರುವ ವ್ಯಕ್ತಿಯ ಜಾತಿಯ ಬಗ್ಗೆ ಯಾವುದೇ ಅನುಮಾನ ಇದ್ದಲ್ಲಿ ದೂರುದಾರರು ಮಾನ್ಯ ನ್ಯಾಯಾಲಯವನ್ನು ಸಂಪರ್ಕಿಸಬಹುದು ಎಂಬುದರ ಅರಿವು ಇವರಿಗೆ ಇರುವಾಗ, **ಎಚ್.ಎ.ಎಲ್. ಸಂಸ್ಥೆಯ ಪ್ರಭಾನ್ವಿತ ಮೇದಾವಿ ಹಿರಿಯ ಅಧಿಕಾರಿಗಳು ದೂರನ್ನು ಸ್ವೀಕರಿಸಿ, ಪ್ರೋತ್ಸಾಹಿಸಿ, ಕ್ರಮ ಕೈಗೊಳ್ಳುವ ಅವಶ್ಯಕತೆ ಏನು?**

3) ಈ ಹಿರಿಯ ಅಧಿಕಾರಿಗಳು ನಿಜವಾಗಿಯೂ **ತಿಳಿದಿಲ್ಲದವರಾಗಿದರೇ** ಅಥವಾ ದೂರುದಾರರೊಂದಿಗೆ **ಜೊತೆಗೂಡಿ** ನನ್ನನ್ನು ಗುರಿ ಮಾಡಿದರೇ ಎಂಬುದು ಪ್ರಶ್ನಾರ್ಥಕವಾಗಿದೆ?

ಇದು ಕೇವಲ ಸಂಪೂರ್ಣ ತನಿಖೆಯಿಂದ ಮಾತ್ರ ಬಹಿರಂಗವಗುತ್ತದೆ.

ದಿ: **12.03.2013** ರಂದು ನಾನು ಹೆಚ್ಚುವರಿ ಮಹಾವ್ಯವಸ್ಥಾಪಕರು (ಮಾ.ಸಂ) ಬೆಂ.ಸಂ.ರವರಿಗೆ ಶ್ರೀ.ಭೀಮರಾವ್ ನವಲೇಕರ್ ಹಾಗೂ ಅವರು ನೀಡಿರುವ ದೂರಿನ ನೈಜತೆಯನ್ನು ಪರಿಶೀಲಿಸಿಲು ಲಿಖಿತ ಮನವಿಯನ್ನು ಸಲ್ಲಿಸಿದೆ. ನನ್ನ ಮನವಿಯನ್ನು ಮುಖ್ಯ ವ್ಯವಸ್ಥಾಪಕರು (ಮಾ.ಸಂ) ದುರಸ್ಥಿ ವಿಭಾಗಕ್ಕೆ ರವಾನಿಸಲಾಯಿತು.

ಸದರಿ ಪ್ರತಿಯನ್ನು ದಿ: **19.03.2013** ರಂದು ಹಿರಿಯ ವ್ಯವಸ್ಥಾಪಕರು (ಭದ್ರತೆ) ದುರಸ್ಥಿ ವಿಭಾಗಕ್ಕೆ ಪ್ರತಿ ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತ ವಿಭಾಗಕಗಕೆ ರವಾನಿಸಿ, ಶ್ರೀ.ಭೀಮರಾವ್ ನವಲೇಕರ್ ಹಾಗೂ ಅವರದೂರಿನ ನೈಜತೆಯನ್ನು ಪರಿಶೀಲಿಸುವಂತೆ ತಿಳಿಸಲಾಯಿತ್ತು.

ಶ್ರೀ.ಭೀಮರಾವ್ ನವಲೇಕರ್ ರವರ ದೂರಿನ ನೈಜತೆಯ ಬಗ್ಗೆ ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತ ವಿಭಾಗ ರವರು ಕೈಗೊಂಡ ತನಿಖಾ ವರದಿಯನ್ನು ಉಪ ಮಹಾ ವ್ಯವಸ್ಥಾಪಕರು (ಭದ್ರತೆ) ಬೆಂಗಳೂರು ಸಂಕೀರ್ಣ ರವರು **ದಿ: 21.03.2013** ರಂದು ಮುಖ್ಯ ವ್ಯವಸ್ಥಾಪಕರು (ಮಾ.ಸಂ) ದುರಸ್ಥಿ ವಿಭಾಗ ರವರಿಗೆ ರವಾನಿಸಿರುತ್ತಾರೆ.

ಉಪ ವ್ಯವಸ್ಥಾಪಕರು (ಭದ್ರತೆ) ಗುಪ್ತ ವಿಭಾಗ ರವರು ದೂರುದಾರರು ಹಾಗೂ ದೂರು ನೈಜವಲ್ಲವೆಂದು ತಮ್ಮ ಪರಿಶೀಲನಾ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.

**ಎಚ್.ಎ.ಎಲ್ ಜಾಗ್ರತಾ ನಿಯಮಗಳಲ್ಲಿ ದೂರನ್ನು ನಿಭಾಯಿಸುವ ಬಗ್ಗೆ ವಿವರಿಸಲಾಗಿದೆ.**

ಅನಾಮಧೇಯ / ಹುಸಿತನ ದೂರುಗಳ ಮೇಲೆ ಸಾಮಾನ್ಯ ಆಡಳಿತದಂತೆ ಆಡಳಿತಾಧಿಕಾರಿಗಳು ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಆಯೋಗವು ಸೂಚನೆಗಳನ್ನು ನೀಡಿದೆ. ಅನುಮಾನಾಸ್ಪದ ಸಂದರ್ಭದಲ್ಲಿ, ದೂರಿನ ಸಂಕೇತಿಕರಣದ ಪಾತ್ರವು ವಾಸ್ತವವಾಗಿ ಅವರಿಂದ ಕಳುಹಿಸಲ್ಪಟ್ಟಿದೆಯೆಂದು ದೂರಿನ ಸಹಿದಾರರಿಂದ ಕೇಳುವ ಮೂಲಕ ಪರಿಶೀಲಿಸಬಹುದು. ದೂರು ನೀಡಿದ ವಿಳಾಸಕ್ಕೆ ಅವರು ಸಂಪರ್ಕಿಸಲು ಸಾಧ್ಯಾವಾಗದಿದ್ದರೆ ಅಥವಾ ಸಮಂಜಸವಾದ ಸಮಯದೊಳಗೆ ಅವನಿಗೆ ಉತ್ತರ ದೊರೆಯದಿದ್ದಲ್ಲಿ, ದೂರು ತಪ್ಪಾಗಿರುತ್ತದೆ ಮತ್ತು ಅದಕ್ಕೆ ತಕ್ಕಂತೆ ನಿರ್ಲಕ್ಷಿಸಬೇಕು ಎಂದು ಭಾವಿಸಬೇಕು ಹೇಗಾದರೂ, ಯಾವುದೇ ಇಲಾಖೆ / ಸಂಘಟನಯು ಅಂತಹ ದೂರುಗಳಲ್ಲಿ ಆರೋಪಿಸಿದ ಯಾವುದೇ ನೈಜ ಸತ್ಯಗಳನ್ನು ನೋಡಬೇಕೆಂದು ಸೂಚಿಸಿದಲ್ಲಿ ಅದರಲ್ಲಿ ಸಿಕ್ಕಿದ ಉದ್ಯೋಗಗಳ ಮಟ್ಟವನ್ನು ಹೊರತುಪಡಿಸಿ, ಆಯೋಗದ ಅನುಮೋದನೆಗೆ ಸಿ.ವಿ.ಓ ಅಥವಾ ಸಂಸ್ಥೆಯ ಮುಖ್ಯಸ್ಥರ ಮೂಲಕ ಕಳುಹಿಸಬೇಕು ಎಂದು ತಿಳಿಸಿರುತ್ತಾರೆ.

ಶ್ರೀ. ಭೀಮರಾವ್ ನವಲೇಕರ್ ರವರ ದೂರನ್ನು ಸ್ವೀಕರಿಸಿ, ಪ್ರೋತ್ಸಾಹಿಸಿ, ಕ್ರಮ ಕೈಗೊಂಡ ಎಚ್.ಎ.ಎಲ್ ಸಂಸ್ಥೆ ಪ್ರಧಾನ ಕಛೇರಿ, ಬೆಂಗಳೂರು ಸಂಕೀರ್ಣ ಮತ್ತು ದುರಸ್ಥಿ ವಿಭಾಗದ ಎಲ್ಲ ಅಧಿಕಾರಿಗಳು **"ಎಚ್.ಎ.ಎಲ್ ಜಾಗ್ರತಾ ಕೈಪಿಡಿಯನ್ನು"** ತಿಳಿದಿರುವ / ಅರಿತಿರುವ ನುರಿತ ತಜ್ಞರು.

**ಪ್ರಕರಣ ಹೀಗಿರುವಾಗ,**

1) ನಿಯಮನುಸಾರ, ಅನಾಮಧೇಯ/ಹುಸಿತನದ ದೂರಿನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವ ಅಗತ್ಯವಿಲ್ಲವೆಂದು ಅರಿತಿದ್ದ **ಆಡಳಿತ ಮಂಡಳಿಯ ವರ್ಗದವರು ಕ್ರಮ ಜರುಗಿಸು ಅಗತ್ಯ ಏನಿತ್ತು?**

2) ಕ್ರಮ ಕೈಗೊಳ್ಳುವ ಮುನ್ನ ನಿಯಮಾನುಸಾರ, ಯಾವೊಬ್ಬ ಅಧಿಕಾರಿಯಾಗಲೀ **ದೂರುದಾರ ಮತ್ತು ದೂರಿನ ನೈಜತೆ ಬಗ್ಗೆ ಕೈಪಿಡಿಯಲ್ಲಿ ವಿವರಿಸಿರುವ ರೀತಿಯಾಕೆ ಪರಿಶೀಲಿಸಲ್ಲಿಲ?**

3) **ಹುಸಿತನದ ದೂರಾಗಿದರು ಸಹಾ ಇದನ್ನು ಕ್ರಮ ಕೈಗೊಳ್ಳುವ ಮುನ್ನ ಸಿ.ವಿ.ಓ ಅಥವಾ ಸಂಸ್ಥೆಯ ಮುಖ್ಯಸ್ಥರ ಮೂಲಕ ಆಯೋಗದ ಅನೂಮೋದನೆಗಾಗಿ ಏಕೆ ಕಳುಹಿಸಲ್ಲಿಲ?**

**2014 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, (ನಾ.ಹ.ಜಾ.ನಿ.) ರವರು ನನ್ನ ಜಾತಿ ಪರಿಶೀಲನೆ ಮಾಡಲು ಕ್ರಮ ಜಾರಿ ಗೊಳಿಸಿರುತ್ತಾರೆ.**

ದಿ: **22.05.2014** ರಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರವರ ಕಛೇರಿ, (ನಾ.ಹ.ಜಾ.ನಿ.)ಕ್ಕೆ ಭೇಟಿ ನೀಡಿ ಅವರ ಸಂದರ್ಶನಕ್ಕಾಗಿ ಮನವಿಯನ್ನು ಸಲ್ಲಿಸಿ, ಅದೇ ದಿನ ಅವರನ್ನು ಭೇಟಿಮಾಡಿ "ನಾ.ಹ.ಜಾ.ನಿ. ಸಿಬ್ಬಂದಿಯವರು ಈಗಾಗಲೇ ನನ್ನ ಜಾತಿ ವಿಚಾರಣೆಯನ್ನು ನಡೆಸುತ್ತಿದ್ದು, ಈ ವಿಚಾರವಾಗಿ ನಾನು ಮತ್ತು ನನ್ನ ಕುಟುಂಬದವರು ತನಿಖೆಯು ನ್ಯಾಯಬದ್ಧವಾಗಿ ನಡೆತ್ತದೆ ಎಂಬ ಬರವಸೆಯ ಮೇರೆಗೆ ತನಿಖಾಧಿಕಾರಿಗೆ ಸಂಪೂರ್ಣ ಸಹಕಾರ ನೀಡಿದ್ದೆವೆ, ಆದರೆ ವಿಶ್ವಾಸಾರ್ಹ ಮೂಲಗಳ ಮೂಲಕ ಬಂದ ಮಾಹಿತಿ ಏನೆಂದರೆ ಕೆಲವು ಪ್ರಾಭವಾಶಾಲಿ ವ್ಯಕ್ತಿಗಳು ಮತ್ತು ನಾ.ಹ.ಜಾ.ನಿ ನ ಒಬ್ಬರು ಹಿರಿಯ ಅಧೀಕಾರಿ ಸೇರಿ ಅಂತಿಮ ಹಂತದಲ್ಲಿರುವ ನನ್ನಯ ತನಿಖೆ ಮೇಲೆ ತಮ್ಮ ಪ್ರಾಭಾವವನ್ನು ಬೀರುತ್ತಿದ್ದಾರೆ" ಎಂದು ತಿಳಿಸಿದ್ದೆನೆ.

ಪಕ್ಷಪಾತವಿಲ್ಲದ ತನಿಖೆ ಮಾಡಿ, ಯಾವುದೇ ಅಂತಿಮ ತಿರ್ಮಾನ ತೆಗೆದಕೊಳ್ಳುವ ಮುನ್ನ ನನ್ನ ಜಾತಿ ವಿಚಾರಣೆ ವೇಳೆ ಸಂಗ್ರಹಿಸಿದ ದಾಖಲಾತಿಗಳನ್ನು ತಾವೆ ಖುದ್ದಾಗಿ ಒಮ್ಮೆ ವಿಮರ್ಶಿಸಿ ಎಂದು ಎ.ಡಿ.ಜಿ.ಪಿ (ನಾ.ಹ.ಜಾ.ನಿ.)ರವರಿಗೆ ನಾನು ಮನವಿಯನ್ನು ಮಾಡಿದ್ದಕ್ಕೆ ಅವರು ತಾವೆ ತನಿಖಾಧಿಕಾರಿಯನ್ನು ಖುದ್ದಾಗಿ ಕರೆದು ನನ್ನ ಜಾತಿಯ ನೈಜ್ಯತೆ ಕುರಿತು ತಿಳಿದುಕೋಳ್ಳುತ್ತೆನೆ ಎಂದು ತಿಳಿಸಿ ನನ್ನ ಇರುವಿಕೆಯಲ್ಲಿಯೇ ಸದರಿಯವರು ಸಹ ತನಿಖಾಧಿಕಾರಿಯನ್ನು ಖುದ್ದಾಗಿ ಬರಿವಂತೆ ಸಂಬಂಧಪಟ್ಟ ಸಿಬ್ಬಂದಿಗೆ ತಿಳಿಯಪಡಿಸಿದರು.

ನಂಬಿಕೆ ಇಟ್ಟು ನಾನು ಅಲ್ಲಿಂದ ಹೊರಟೆ.

**ದಿ:23.05.2014,** ಪೊಲೀಸ್ ಇನ್ಸ್‌ಪೆಕ್ಟರ್, (ನಾ.ಹ.ಜಾ.ನಿ.) ರವರು ನನ್ನ ಜಾತಿ ಪರಿಶೀಲನೆಯ ತನಿಖಾ ವರದಿ ಹಾಗೂ ಶೇಖರಿಸಿದ ದಾಖಲಾತಿಗಳನ್ನು ಪೊಲೀಸ್ ಅಧೀಕ್ಷಕರು, (ನಾ.ಹ.ಜಾ.ನಿ.) ರವರಿಗೆ ಸಲ್ಲಿಸುತ್ತಾರೆ. ಆ ಅಂತಿಮ ತನಿಖಾ ವರದಿಯಲ್ಲಿ ನಾನು ಕ್ರೈಸ್ತನೆಂದು ಉಲ್ಲೇಖಿಸಿರುತ್ತಾರೆ.

ಅದೇ ದಿನಾಂದಂದು ಪೊಲೀಸ್ ಅಧೀಕ್ಷಕರು, (ನಾ.ಹ.ಜಾ.ನಿ.)ರವರು ಸದರಿ ವರದಿಯನ್ನು ಮಂಡಿಸಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, (ನಾ.ಹ.ಜಾ.ನಿ.) ರವರಿಗೆ ರವಾನಿಸಿರುತ್ತಾರೆ.

**ದಿ:30.05.2014** ರಂದು ಎಚ್.ಎ.ಎಲ್ ಸಂಸ್ಥೆಗೆ ಸಂಬಂಧಪಡದ ಹೊರಗಿನ ವ್ಯಕ್ತಿ ಒಬರ್ರು ತನ್ನನು ಎವುದೋ ಎಸ್ಸಿ/ಎಸ್ಟಿ ಸಂಘದ ಪದಾಧಿಕಾರಿ ಎಂದು ಹೇಳಿಕೊಳ್ಳುತ್ತ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, (ನಾ.ಹ.ಜಾ.ನಿ.) ದಲ್ಲಿ ನಾನು ಮತ್ತು ನನ್ನ ಕಿರಿಯ ಸಹೋದರ ಕ್ರೈಸ್ತ ಮತಕ್ಕೆ ಸೇರಿದವರೆಂದು ಇವರ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ, ಎಚ್.ಎ.ಎಲ್ ಸಂಸ್ಥೆಯಿಂದ ತೆಗೆದು ಹಾಕುವಂತೆ ಕೋರಿ ಹಲವು ದಾಖಲಾತಿಗಳೊಂದಿಗೆ ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ದೂರನ್ನು ನೀಡುವಾಗ, ದೂರುದರರು ನನ್ನ ತಂದೆಯವರಿಗೆ ಸಂಬಂಧ ಪಟ್ಟ **10 ಪುಟಗಳ ಗೌಪ್ಯ ಸೇವಾ ದಾಖಲಾತಿಗಳನ್ನು** ಲಗತಿಸಿರುತ್ತಾರೆ.

ಗಮನಿಸಬೇಕಾದ ಅಂಶವೇನೆಂದರೆ, ಈ ಎಲ್ಲಾ ಗೌಪ್ಯ ಸೇವಾ ದಾಖಲಾತಿಗಳ ಎಚ್.ಎ.ಎಲ್ ಸಂಸ್ಥೆಯ ಅಧೀನದಲ್ಲಿ ಇದು, ಸದರಿ ದಾಖಲಾತಿಗಳನ್ನು ನನ್ನ ಜಾತಿ ವಿಚಾರಣೆ ಸಂರ್ಧಭದಲ್ಲಿ, ಎಚ್.ಎ.ಎಲ್ ಸಂಸ್ಥೆಯು ತಾನಿಖಾಧಿಕಾರಿ (ನಾ.ಹ.ಜಾ.ನಿ.) ರವರಿಗೆ ದಿ: 07.05.2014 ರಂದೇ ಸಲ್ಲಿಸಿದು.

(ಸದರಿ ದೂರಿನ ಆದಾರದ ಮೇರೆಗೆ (ನಾ.ಹ.ಜಾ.ನಿ.)ಪ್ರಾಧಿಕಾರವು ತದ ನಂತರ ನನ್ನ ಕಿರಿಯ ಸಹೋದರನ ಜಾತಿಯ ಬಗ್ಗೆ ಮರು ಪರಿಶೀಲನೆ ಕ್ರಮ ಜಾರಿಗೆ ತಂದರು)

ದಿ: 30.05.2014 ರ (ಅಂದರೆ ಸದರಿ ದೂರು ನೀಡಿದ ದಿನ) ವರೆಗೂ, ದೂರಿನೊಂದಿಗೆ ಲಗತಿಸಿದ ಗೌಪ್ಯ ಸೇವಾ ದಾಖಲಾತಿಗಳು ಕೇವಲ ಎಚ್.ಎ.ಎಲ್ಲ್ ಮತ್ತು ನಾ.ಹ.ಜಾ.ನಿ. ಪ್ರಾಧಿಕಾರದ ಅಧೀನದಲ್ಲಿ ಇರಬೇಕಾದ ದಾಖಲಾತಿಗಳು. ಸದರಿ ದಾಖಲಾತಿಗಳನ್ನು ಮಾ.ಹ.ಕಾ ನಿಯಮದಡಿಯಲ್ಲಿ ಎಚ್.ಎ.ಎಲ್ ಸಂಸ್ಥೆಯಿಂದಾಗಲೀ ಅಥವಾ ನಾಗರೀಕ ಹಕ್ಕು ಜಾರಿ ನಿರ್ದೇಶನ ದಿಂದಾಗಲೀ ದೂರುದಾರರಿಗೆ ನೀಡಿರುವುದಿಲ್ಲ. ಪ್ರಕರಣ ಹಿಗಿರುವಾಗ, ಎಚ್.ಎ.ಎಲ್ ಸಂಸ್ಥೆಯಿಂದಾಗಲೀ ಅಥವಾ ನಾಗರೀಕ ಹಕ್ಕು ಜಾರಿ ನಿರ್ದೇಶನದ ಅಧೀನದಲ್ಲಿ ಇರಬೇಕಾಗಿರುವ ಗೌಪ್ಯ ಸೇವಾ ದಾಖಲಾತಿಗಳು ಇವರ ಕೈ ಸೇರಿದ್ದು ಹೇಗೆ?

**ಹಾಗಿದ್ದಲ್ಲಿ ಸದರಿ ವ್ಯಕ್ತಿಯು ಎಚ್.ಎ.ಎಲ್ ಸಂಸ್ಥೆ ಅಥವಾ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಸುಪರ್ದೀಫಿಯಲ್ಲಿರುವ ದಾಖಲಾತಿಗಳನ್ನು ಕದ್ದೊಯ್ದರೇ?**

**ಅಥವಾ**

**ನನ್ನನ್ನು ಮತ್ತು ನನ್ನ ಕುಟುಂಬ ವರ್ಗದವರನ್ನು ಮಾನಸಿದ ವ್ಯಥೆಗೆ ಗುರಿಪಡಿಸಲು ಎಚ್.ಎ.ಎಲ್ ಸಂಸ್ಥೆ ಅಥವಾ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಪ್ರಾಧಿಕಾರಿದವರು ಬೇಕೇಂದೇ ಉದ್ದೇಶಪೂರ್ವಕವಾಗಿ ಹೊರಗಿನ ವ್ಯಕ್ತಿಗೆ ದಾಖಲಾತಿಗಳನ್ನು ಒದಗಿಸಿದರೇ?**

ಇದು ಕೇವಲ ಸಂಪೂರ್ಣ ತನಿಖೆಯಿಂದ ಮಾತ್ರ ಬಹಿರಂಗವಗುತ್ತದೆ.

(ನಾ.ಹ.ಜಾ.ನಿ.) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಉಪ ಪೊಲೀಸ್ ಮಹಾನಿರೀಕ್ಷಕರು, (ನಾ.ಹ.ಜಾ.ನಿ.) ರವರು **ದಿ: 03.06.2014** ರಂದು ನನ್ನ ಜಾತಿ ಪರಿಶೀಲನೆಯ ತನಿಖಾ ವರದಿಯನ್ನು ಉಪ ಆಯುಕ್ತರು ಮತ್ತು ಛೇರ್‌ಮೇನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿರುತ್ತಾರೆ.

ಪ್ರಕರಣದಲ್ಲಿ ಸಿಲುಕಿಸುವ ಉದ್ದೇಶದಿಂದ, ತನ್ನ ಅಧೀನಾಧಿಕಾರಗಳು ಸಲ್ಲಿಸಿರುವ ಪರಿಶೀಲನಾ ವರದಿ ಮತ್ತು ದಾಖಲಾತಿಗಳನ್ನು ಕಡೆಗಣಿಸಿ, ಬದಿಗೊತ್ತಿ ನನ್ನ ವಿರುದ್ಧ ತಪ್ಪು ಅಭಿಪ್ರಾಯವನ್ನು ಉಲ್ಲೇಖಿಸಿರುತ್ತಾರೆ.

ಕರ್ನಾಟಕ ಎಸ್ಸಿ, ಎಸ್ಟಿ & ಒಬಿಸಿ (ನೇಮಕಾತಿಯಲ್ಲಿ ಮೀಸಲಾತಿ) ನಿಯಮ 1992 ರನ್ವಯ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಪ್ರಾಧಿಕಾರವು ಕೇವಲ 02 ಸಂಧರ್ಬಗಳಲ್ಲಿ ಮಾತ್ರ ತಮ್ಮ ಪಾತ್ರ ನಿಭಾಯಿಸುವ ನಿಯಮವಿರುತ್ತದೆ.

**ನಿಯಮ 07 : ನಿಗದಿತ ಪ್ರಮಾಣ ಪತ್ರ ಜಾರಿ**

**ಉ.ನಿ: 7 (4)** ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು ಜಾತಿ ಸಿಧಂತ್ವ ಪತ್ರ ನೀಡಲು ಪಡೆದ ಅರ್ಜಿಯ ವಿಚಾರಣೆ/ತನಿಖೆಯ ನಂತರವೂ ಸಹ ಮನವಿಯ ಕುರಿತು ಅನುಮಾನಸ್ಪದವಾಗಿದ್ದಲ್ಲಿ ಮತ್ತು ಅಂತಿಮವಾಗಿ ನಿರ್ಣಯ ಕೈಗೊಳ್ಳುವುದಕ್ಕೆ ಆಗದಿದ್ದಲ್ಲಿ ಮಾತ್ರ ಮನವಿಯ ವಿವರವಾದ ತನನಿಖೆಗಾಗಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಉಲ್ಲೇಖಿಸಬಹುದಾಗಿದೆ.

**ನಿಯಮ 7 (ಎ) ಸುಳ್ಳು ಪ್ರಮಾಣ ಪತ್ರ ಪಡೆದಕ್ಕೆ ಶಿಕ್ಷೆ**

**ಉ.ನಿ. 7 (ಎ) (2)** ಜಾತಿ ಪರಿಶೀಲನಾ ಸಮಿತಿಯು ಮನವಿದಾರರಿಗೆ ಜಾತಿ ಸಿಧಂತ್ವ ಪತ್ರ ನೀಡಲು ನಿರಾಕರಿಸಿದಲ್ಲಿ/ತಿರಿಸ್ಕರಿಸದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ಮನವಿದಾರರ ವಿರುದ್ಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಪ್ರಾಧಿಕಾರವು ಕಾನೂನು ರೀತ್ಯಾ ಕ್ರಮ ಜರುಗಿಬಹುದಾಗಿದೆ.

ನಾನು ಈ ಎರಡು ನಿಬಂಧನೆಗಳಿಗೂ ಒಳಪಡದವನಾಗಿದ್ದು, (ನಾ.ಹ.ಜಾ.ನಿ.) ದವರು ಯಾವ ಕಾನೂನಿನ ರೀತ್ಯಾ ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿ, ವಿಚಾರಣೆಯನ್ನು ನಡೆಸಿದರು?

ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿ, ವಿಚಾರಣೆಯನ್ನು ನಡೆಸಿ ಕಾನೂನನ್ನು ಉಲ್ಲಂಘಿಸಿದ್ದರು ಸಹಾ ಅವರು ನಡೆಸಿದ ವಿಚಾರಣಾ ವರದಿ ಹಾಗು ವಿಚಾರಣಾ ಸಮಯದಲ್ಲಿ ಸಂಗ್ರಹಿಸಿದ ದಾಖಲಾತಿಗಳನ್ನು ತಾವೇ ಪರಿಗಣಿಸದೆ ಯಾರ ಒತ್ತಡಕ್ಕೊ ಮಣಿದು ಕ್ಷುಲ್ಲಕ ಕಾರಣಗಳಿಗಾಗಿ ಕಣ್ಣು ಒರೆಸುವ ತನಿಖೆಯನ್ನು ಯಾರ ಇಚ್ಛೆಗಾಗಿ ಕೈಗೊಂಡರು ಎಂಬುದು ಪ್ರಶ್ನಾರ್ಥಕವಾಗಿದೆ?

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, (ನಾ.ಹ.ಜಾ.ನಿ.) ರವರು ರಜಾ ಅವಧಿಯಲ್ಲಿರುವಾಗ್ಗೆ ಮತ್ತು ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿ.ಜಾ.ಪ.ಸ ಪ್ರಾಧಿಕಾರದಲ್ಲಿ ನನ್ನ ಜಾತಿ ಕುರಿತು ತನಿಖಾ ಹಂತದಲ್ಲಿ ಪರಿಶೀಲನೆಯಲ್ಲಿರುವಾಗ ಯಾರೋ ಕ್ಷುಲ್ಲಕರನ್ನು ಸಂತೈಸಲು **ದಿ: 12.06.2014** ರಂದು ಉಪ ಪೊಲೀಸ್ ಮಹಾನಿರೀಕ್ಷಕರು, (ನಾ.ಹ.ಜಾ.ನಿ.) ರವರು ನನ್ನನ್ನು ಸೇವೆಯಿಂದ ತೆಗೆದು ಹಾಕುವಂತೆ ಉಲ್ಲೇಖಿಸಿ ಎಚ್.ಎ.ಎಲ್ ಸಂಸ್ಥೆಗೆ ಪತ್ರವನ್ನು ರವಾನಿಸಿರುತ್ತಾರೆ.

ಉಪ ಪೊಲೀಸ್ ಮಹಾನಿರೀಕ್ಷಕರು(ಉ.ಪೊ.ಮ.), (ನಾ.ಹ.ಜಾ.ನಿ.) ರವರು ರವಾನಿಸಿದ ಸದರಿ ಪತ್ರವು **ದಿ:30.05.2014** ರಂದು ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕರು, (ನಾ.ಹ.ಜಾ.ನಿ.) ರವರು ತಮ್ಮ ಕಛೇರಿ ಟಿಪ್ಪಣಿಯಲ್ಲಿ **"ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ವತಿಯಿಂದ ನಿರ್ಧಾರ ಪಡೆದ ನಂತರ ಪತ್ರವನ್ನು ಎಚ್.ಎ.ಎಲ್ ಕಳುಹಿಸತಕ್ಕದ್ದು"** ಎಂದು ಸ್ಪಷ್ಟವಾಗಿ ನಮೂದಿಸಿರುವಾಗ. ಉ.ಪೊ.ಮ. (ನಾ.ಹ.ಜಾ.ನಿ.)ರವರು ಅವರ ಮೇಲಾಧಿಕಾರಿಯ ಆದೇಶವನ್ನು ಉಲಂಘನೆಮಾಡಿದು ಬಹಿರಂಗಪಡಿಸುತ್ತದೆ.

ದಿ: 16.06.2014 ರಂದು ಉಪ ಆಯುಕ್ತರು ಮತ್ತು 03 ಇತರೆ ಸದಸ್ಯರನ್ನು ಒಳಗೊಂಡ (ಜಿ.ಜಾ.ಪ.ಸ) ಯವರು ನಾನು ಕ್ರೈಸ್ತ ಮತಕ್ಕೆ ಸೇರಿದವನಾಗಿದ್ದು, ನನ್ನ ಜಾತಿ **“**ಆದಿ ದ್ರಾವಿಡ**”** ಯನ್ನು ತಿರಸ್ಕರಿಸಲಾಗಿದೆ ಎಂದು ಅಧಿಸೂಚನೆ ಹೊರಡಿಸಿರುತ್ತಾರೆ. ನಾ.ಹ.ಜಾ.ನಿ. ಹಾಗು ಜಿ.ಜಾ.ಪ.ಸರವರು ಯಾವುದೆ ಸ್ಪಷ್ಟ ಪುರಾವೆಗಳು/ ಆಧಾರ ಇಲ್ಲದಿದರು ಸಹಾ, ನನ್ನ ಮತ್ತು ನನ್ನ ಸಹೋದರರೆಲ್ಲರೂ ತಮ್ಮ ಶಾಲಾ ದಾಖಲಾತಿ ಮತ್ತು ವರ್ಗವಾಣೆ ಪತ್ರಗಳಲ್ಲಿ ತಿರುಚಿರುವುದಾಗಿ ಎಂದು ತಪ್ಪಾಗಿ ಉಲ್ಲೇಖಿಸಿರುತ್ತಾರೆ.

ನನ್ನ ಗಮನಕ್ಕೂ ಬಾರದೆ ಹಾಗು ನಾನು ಉಪಸ್ಥಿತನಿಲ್ಲದಗ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು ಸದರಿ ಅಧಿಸೂಚನೆಯನ್ನು ಹೊರಡಿಸುವಾಗ ನಾನು ಉಪಸ್ಥಿತನಿದೆ ಎಂದು ನಮೂದಿಸಿರುತ್ತಾರೆ. ಸತ್ಯಂಶಾವೇನೆಂದರೆ, ಮಾ.ಹ.ಕಾ ಅಡ್ಡಿಯಲ್ಲಿ ಪಡೆದಿರುವ ದಾಖಲಾತಿಗಲನ್ನು ಪರಿಶೀಲಿಸಿದಾಗ, ಅ ದಿನ ಜಿ.ಜಾ.ಪ.ಸ ಯಾವ ಒಂದು ಸಮಿತಿ ಸಭೆಯು ನಡೆದಿರುವ ಹಾಗೆ ಕಛೇರಿ ಟಿಪ್ಪಣಿಯಲ್ಲಿ ಎಲ್ಲಿಯೂ ನಮೂದಾಗಿಲ್ಲ, ಬದಲಾಗಿ ಕಾರ್ಯದರ್ಶಿಯಾಗಿರುವ (ಜಿ.ಜಾ.ಪ.ಸ) ಹಾಗು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ತಾವೇ ದಾಖಲಾತಿಗಳನ್ನು ಸೃಷ್ಟಿಸಿ ಎಲ್ಲರಿಂದ ಸಹಿಗಳನ್ನು ಪಡೆದಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, (ನಾ.ಹ.ಜಾ.ನಿ.) ರವರು ಇನ್ನೂ ರಜಾ ಅವಧಿಯಲ್ಲಿರುವಾಗ್ಗೆ ಮತ್ತು ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿ.ಜಾ.ಪ.ಸ ಪ್ರಾಧಿಕಾರದಲ್ಲಿ ನನ್ನ ಜಾತಿ ಕುರಿತು ತನಿಖಾ ಹಂತದಲ್ಲಿ ಇನ್ನೂ ಪರಿಶೀಲನೆಯಲ್ಲಿರುವಾಗ, ಉಪ ಪೊಲೀಸ್ ಮಹಾನಿರ್ದೇಶಕರು, (ನಾ.ಹ.ಜಾ.ನಿ.)ರವರು ತಮ್ಮ ಪ್ರಬಲರನ್ನು ಸಂತೈಸಲು ಎಚ್.ಎ.ಎಲ್ ಸಂಸ್ಥೆಯಿಂದ ನನ್ನ ಸೇವೆಯನ್ನು ವಜಾಗೊಳಿಸುವಂತೆ **ದಿ: 17.06.2014** ರಂದು ಪುನ: ಪತ್ರವನ್ನು ಬರೆದಿರುತ್ತಾರೆ.

("ನಾ.ಹ.ಜಾ.ನಿ. ರವರಿಗೆ ಸೇವೆಯಿಂದ ವಜಾಗೊಳಿಸುವಂತೆ ಶಿಫಾರಸ್ಸು ಮಾಡುವ ಯಾವ ಹಕ್ಕನ್ನು ಹೊಂದಿರುವುದಿಲ್ಲ" ಎಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳನ್ನು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ಜಾತಿ (ನೆಮಕಾತಿಯಲ್ಲಿ ಮೀಸಲಾತಿ) ನಿಯಮ 1992 ಗಳಲ್ಲಿ ಸ್ಪಷ್ಟವಾಗಿ ನಮೂದಿಸಿರುವಾಗ, ಉ.ಪೊ.ಮ (ನಾ.ಹ.ಜಾ.ನಿ.)ರವರು ಎಚ್.ಎ.ಎಲ್ಗೆ ಬರೆದಿರುವ ಎರಡು ಪತ್ರಗಳು ಕಾನೂನಿನ ಉಲ್ಲಂಘನೆಯಾಗಿರುತ್ತದೆ.)

**ದಿ: 18.06.2014** ರಂದು ನಾನು ಬೆಂಗಳೂರಿನ ಜಿಲ್ಲಾ ಸಮಾಜ ಕಲ್ಯಾಣ ಮಂಡಳಿ ಕಛೇರಿಗೆ ನನ್ನ ಜಾತಿ ಪರಿಶೀಲನೆಯ ಸ್ಥಿತಿ ತಿಳಿದುಕೊಳ್ಳಲು ಭೇಟಿ ನೀಡಿದ ಸಂದರ್ಭದಲ್ಲಿ ದಿ: 16.06.2014 ರಂದು ಕೆಲಒಂದು ದಾಖಲಾತಿಗಳನ್ನುಯ ತೆಗೆದಕೊಂಡು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗೆ ಮುಂದೆ ಹಾಜರಾಗುವಂತೆ ದಿ: 06.06.2014 ರಂದು ಬರೆಯಲಾ ಸೂಚನಾ ಪತ್ರವನ್ನು ನೀಡಿರುತ್ತಾರೆ. ಈ ಪತ್ರದಲ್ಲಿ ಮಾತ್ರವೆ ಮೊದಲನೆಬಾರಿಗೆ ನನ್ನ ಜಾತಿಯ ಕುರಿತು ಅಗತ್ಯ ದಾಖಲಾತಿಗಳನ್ನು ಸದರಿ ಜಿ.ಜಾ.ಪ.ಸ.ಯ ಮುಂದೆ ಹಾಜರಾಗುವಂತೆ ಹೇಳುತ್ತಾರೆ, ಅದರೆ ಸದರಿ ಪತ್ರವನ್ನು ಮರೆ ಮಾಚಿ ಉದ್ದೇಶಪೂರ್ವಕವಾಗಿ ನನಗೆ ಕಳುಹಿಸಿರುವುದಿಲ್ಲ.

**ಈ ಹಿಂದೆ ಜಿಲ್ಲಾ ಸಮಾಜ ಕಲ್ಯಾಣ ಮಂಡಳಿಯಿಂದ ನೊಂದಾಯಿತ ಅಂಚೆ ಮೂಲಕವಾಗಿ ಕಳುಹಿಸಲಾದ ಎಲ್ಲಾ 07 ಸೂಚನಾ ಪತ್ರಗಳನ್ನು ನಾನು ಈಗಾಗಲೇ ಸ್ವೀಕರಿಸಿರುವಾಗ, ಏಕೆ ಮತ್ತು ಯಾವ ಕಾರಣಕ್ಕಾಗಿ ದಿ: 06.06.2014 ರ ಸೂಚನಾ ಪತ್ರ ಮಾತ್ರವೆ ನನಗೆ ಕಳಹಿಸಿರುವುದಲ್ಲಿವೇಕೆ?**

ಕಾರ್ಯದರ್ಶಿ, ಜಿಲ್ಲಾ ಸಮಾಜ ಕಲ್ಯಾಣ ಮಂಡಳಿ ಸಮಿತಿಯ ಪತ್ರಕ್ಕೆ ಮಾನ್ಯತೆ ಕೊಟ್ಟು **ದಿ:23.06.2014** ರಂದು ಅವರ ಕಛೇರಿಗೆ ಬೇಟಿನೀಡಿ, ನನ್ನ ಜಾತಿಯ ದೃಡೀಕರಣಕ್ಕೆ ಸಂಬಂಧಪಟ್ಟ ಕೆಲವು ದಾಖಲಾತಿಗಳನ್ನು ನೀಡಿ ಉಳಿದ ದಾಖಳಾತಿಗಳನ್ನು ನೀಡಲು ಸಮಯಾವಕಾಶವನ್ನು ನೀಡಲು ಕೋರಿ **ಲಿಖಿತ ಮನವಿಯನ್ನು ನೀಡಿರುತ್ತೇನೆ.**

ನನ್ನ ಸದರಿ ಲಿಖಿತ ಮನವಿಯಲ್ಲಿ ದಿ: 06.06.2016ರ ಸೂಚನಾ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣ ಮಂಡಳಿಯವರ ಕಛೇರಿಯಲ್ಲಿ ದಿ: 18.06.2016 ರಂದೇ ಸ್ವೀಕರಿಸಿರುವ ಬಗ್ಗೆ ಸ್ಪಷ್ಟವಾಗಿ ನಮೂದಿಸಿರುತ್ತೇನೆ.

**ದಿ: 25.06.2014** ರಂದು ಉಪ ಆಯುಕ್ತರು ಹಾಗೂ ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಬೆಂ.ರವರು ನನ್ನ ಜಾತಿ ಪ್ರಾಮಾಣಪತ್ರವನ್ನು ರದ್ದುಪಡಿಸುವ ಆದೇಶವನ್ನು ಹೊರಡಿಸುತ್ತಾರೆ.

ಸದರಿ ಆದೇಶವನ್ನು ಹೊರಡಿಸುವಾಗ ಯಾವುದೇ ಸಮರ್ಥನೆ ಇಲ್ಲದೇ ಹಾಗೂ ನಾ.ಹ.ಜಾ.ನಿ ಮತ್ತು ಜಿ.ಜಾ.ಪ.ಸ ರವರು ಆಧಾರ/ಅಂಶಗಳ ಪೂರ್ವಾಪರ ದಾಖಲಾತಿಗಳನ್ನು ನಮೂದಿಸದೇ ವಿಚಿತ್ರವಾಗಿ "ನಾನು ನನಗೆ ದಿ:10.02.1994ರಂದು "ಆದಿ ದ್ರಾವಿಡ" ಪರಿಶಿಷ್ಟಜಾತಿಗೆ ಸೇರಿದರೆಂದು ನೀಡಲಾದ ಜಾತಿ ಪ್ರಾಮಾಣಪತ್ರವನ್ನು ಸೃಷ್ಠಿಸಿಕೊಂಡಿದೆನೇಂದು ಹಾಗೂ ನನ್ನ ತಂದೆಗೆ ದಿ:06.10.1989ರಂದು "ಆದಿ ದ್ರಾವಿಡ" ಪರಿಶಿಷ್ಟಜಾತಿಗೆ ಸೇರಿದರೆಂದು ನೀಡಿಲಾದ ಜಾತಿ ಪ್ರಾಮಾಣಪತ್ರವನ್ನು ಅವರು ಸಹಾ ಸೃಷ್ಠಿಸಿಕೊಂಡಿದಾರೆಂದು" ಆದೇಶೀಸಿದ್ದಾರೆ.

“ನಾನು ಕ್ರೈಸ್ತ ಜನಾಂಗಕ್ಕೆ ಸೇರಿದವನೆಂದು ಹಾಗೂ ನನ್ನ 03 ಸಹೋದರರು ಶಾಲಾ ದಾಖಲಾತಿಗಳನ್ನು & ವರ್ಗವಾಣೆ ಪತ್ರವನ್ನು ತಿದ್ದುಪಡೆಮಾಡಿದ್ದೆವೆ, ಅದರಿಂದ ನಾನು “ಆದಿ ದ್ರಾವಿಡ” ಪರಿಶಿಷ್ಟಜಾತಿಗೆ ಸೇರಿದವನಲ್ಲಾವೆಂದು ತಿರಸ್ಕರಿಸಿದ್ದಿದೆ” ಎಂದು ದಿ: 16.06.2014 ರಂದು ಉಪ ಆಯುಕ್ತರು ಮತ್ತು 03 ಇತರೆ ಸದಸ್ಯರನ್ನು ಒಳಗೊಂಡ (ಜಿ.ಜಾ.ಪ.ಸ) ರವರು ಅಧಿಸೂಚನೆಯನ್ನು ಜಾರಿ ಮಾಡಿರುವಾಗ, ಉಪ ಆಯುಕ್ತರು ದಿ:25.06.2014 ರಂದು ಪ್ರತ್ಯೇಕವಾದ ಆದೇಶವನ್ನು “ನಾನು ಹಾಗೂ ನನ್ನ ತಂದೆಯವರು ಜಾತಿ ಪ್ರಾಮಾಣಪತ್ರವನ್ನು ಸೃಷ್ಠಿಮಾಡಿಕೊಂಡಿದೆವೆಂದು ನೀಡುವ ಅವಶ್ಯಕತೆ ಏನೀತ್ತು.

ಉಪ ಆಯುಕ್ತರೇ ಮೇಲೆ ನೀಡಿರುವ ಎರಡು ಆದೇಶಗಳಲ್ಲಿ ಸಹಿಯನ್ನು ನಮೂದಿಸಿರುವಾಗ, ಅವರುತಮ್ಮ ಯಾವ ಆದೇಶದ ಮೇಲೆ ನೀಲ್ಲುವರು ಏಕೇಂದರೆ **ದಿ:16.06.2014** ಮತ್ತು **ದಿ:25.06.2014** ರಂದು ಜಾರಿ ಮಾಡಲಾದ ಎರಡು ಆದೇಶಗಳಲ್ಲಿ ಕಂಡು ಬಿಂಬಿಸುವ ಅಂಶಗಳು ವಿಭಿನ್ನವಾಗಿದೆ?

**ಆದಾಗಿಯೂ ಎರಡೂ ದಾಖಲಾತಿಗಳು ಸೃಷ್ಟಿ ಮಾಡಲಾದ ದಾಖಲಾತಿಗಳು ಎಂಬುದು ಗಮನಾರ್ಹ ಅಂಶ.**

2014 ರ ಅವಧಿಯಲ್ಲಿ ನಾ.ಹ.ಜಾ.ನಿ ದಿಂದ ನನ್ನ ಜಾತಿಯ ಕುರಿತು ಪರಿಶೀಲನಾ ತನಿಖೆಯ ವೇಳೆ ತಹಸಿಲ್ದಾರ್, ಬೆಂಗಳೂರು (ದ) ರವರು ದಿ: 25.03.2014 ರಲ್ಲಿ ನೀಡಿರುವ ಹಿಂಬರಹದಲ್ಲಿ "ನನ್ನ ಜಾತಿಗೆ ಸಂಬಂಧಪಟ್ಟ ದಾಖಲಾತಿಗಳು ಬೆಂಗಳೂರು (ದ) ತಹಸಿಲ್ದಾರ್ ರವರ ಕಛೇರಿಯಲ್ಲಿ ಲಭ್ಯವಿರುವುದಿಲ್ಲ" ಎಂದು ತಿಳಿಸಿರುತ್ತಾರ. ಇದರ ಆದರದ ಮೇಲೆಯೇ, ನನು ನನ್ನ ಜಾತಿ ಪ್ರಾಮಾಣಪತ್ರವನ್ನು ಸೃಷ್ಠಿಮಾಡಿಕೊಂಡಿದೆನೆಂದು ಉಪ ಆಯುಕ್ತರು ಹಾಗೂ ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಬೆಂ.ರವರು ಆದೇಶೀಸಿರುತ್ತಾರೆ.

ತದ ನಂತರ ನಾನು ತಹಸಿಲ್ದಾರ್, ಬೆಂಗಳೂರು (ದ) ಕಛೇರಿಗೆ ಮಾ.ಹ.ಅ ಅಡಿಯಲ್ಲಿ, "1993–1994 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಎಲ್ಲಾ ಅಭ್ಯರ್ಥಿ/ಅರ್ಜಿದಾರರಿಗೆ ನೀಡಲಾದ ಪ್ರಾಮಾಣಪತ್ರಗಳು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನನು ಕೊರಲಾಗಿ ಸದರಿ ಸಾಲಿನಲ್ಲಿ ನೀಡಲಾದ ಪ್ರಾಮಾಣಪತ್ರಗಳು ಯಾವುದೂ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಮರು ಉತ್ತರಿಸಿರುತ್ತಾರೆ.

ಇದರಿಂದ ದೃಡಪಡುವುದು ಏನೇಂದರೆ ತಹಸಿಲ್ದಾರ್, ಬೆಂಗಳೂರು (ದ) ಕಛೇರಿಯಲ್ಲಿ ನನ್ನ ಒಬ್ಬ ದಾಖಲಾತಿಯಲ್ಲ ಆ ವರ್ಷದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಎಲ್ಲಾ ಅಭ್ಯರ್ಥಿ/ಅರ್ಜಿದಾರರಿಗೆ ನೀಡಲಾದ ಪ್ರಾಮಾಣಪತ್ರಗಳು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಯಾವುವು ಸದರಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ.

ಆದರೆ ಸತ್ಯಾಂಶವೇನೆಂದರೆ, ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು 1997 ನೇ ಸಾಲಿನಲ್ಲೇ ಎಚ್.ಎ.ಎಲ್ ಸಂಸ್ಥೆಯಲ್ಲಿ ನನ್ನ ನೇಮಕಾತಿ ಸಂದರ್ಭದಲ್ಲಿ ಸಂಸ್ಥೆಯ ಕೊರಿಕೆಯ ಮೇರೆಗೆ ನನ್ನ ಜಾತಿ ಪರಿಶಿಲನೆಯನ್ನು ಕುಲಂಕುಶವಾಗಿ ನಡೆಸಿ ಆ ಸಂರ್ಧಭದಲ್ಲಿ ನನ್ನ ಪೂರ್ವಾಪರ ಹಾಗೂ ಅವಶ್ಯಕ ದಾಖಲಾತಿಗಳು ಸಂಗ್ರಹಿಸಿರುತ್ತಾರೆ. ಇ ನನ ಜಾತಿ ಪ್ರಾಮಾಣಪತ ಆಧಾರದ ಮೇಲೆಯೇ, ಉಪ ಆಯುಕ್ತರು ಮತ್ತು ಛೇರ್‌ಮೆನ್ ನನ್ನ ಜಾತಿ ಪರಿಶೀಲನೆ ನಡೆಸಿ ನನಗೆ 1998ರಲ್ಲಿ ಜಾತಿ ಸಿಂಧುತ್ವ ಪ್ರಾಮಾಣಪತ್ರವನ್ನು ನೀಡಿರುತ್ತಾರೆ. ಈ ಎಲ್ಲಾ ದಾಖಲಾತಿಗಳನ್ನು ಒಪ್ಪಿ ದೃಡಿಕರಿಸಿರುತ್ತಾರೆ. **ಈ ಎಲ್ಲಾ ದಾಕಲಾತಿಗಳು ಈಗಲು ಜಿ.ಜಾ.ಪ.ಸ. ಕಛೇರಿಯಲ್ಲಿ ಲಭ್ಯವಿದೆ.**

ಪ್ರಕರಣ ಹೀಗಿರುವಾಗ ಸದರಿರವರು ಹೇಗೆ ಮತ್ತು ಯಾವ ಕಾರಣಕ್ಕೆ ನಾನು ಜಾತಿ ಪ್ರಾಮಾಣಪತ್ರ ಸೃಷ್ಠಿ ಮಾಡಿರುವೆನೆಂದು ಆದೇಶವನ್ನು ಹೋರಡಿಸುತ್ತಾರೆ. ಯಾರದ್ದೊ ಒತ್ತಾಯಗಳಿಗೆ ಮಣಿದು ಅಥವಾ ಯಾರದ್ದೊ ಉದ್ದೇಶಗಳನ್ನು ಪೂರೈಸಲು ಅಥವಾ ಹಣದ ಆಸೆಗಾಗಿ, ನಾನು ನನ್ನ ಜಾತಿ ಪ್ರಮಾಣ ಪತ್ರವನ್ನು ತಿದ್ದುಪಡಿ ಮಾಡಿದ್ದಾಗಿ ಹಿಂಬರಹ ನೀಡಿರುವುದ ಪ್ರಶ್ನಾರ್ಥಕವಾಗಿದೆ?

ಇದು ಕೇವಲ ಸಂಪೂರ್ಣ ತನಿಖೆಯಿಂದ ಮಾತ್ರ ಬಹಿರಂಗವಗುತ್ತದೆ.

ನನ್ನ ತಂದೆ ಅವರ ಜಾತಿ ಪ್ರಾಮಾಣಪತ್ರವನ್ನು ಸೃಷ್ಟಿಸಿಕೊಂಡಿದಾರೆಂದು ನಮೂದಿಸುವುದಕ್ಕೆ, ಉಪ ಆಯುಕ್ತರು ಮತ್ತು ಛೇರ್‌ಮೆನ್, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು ದಿ: 28.05.2014 ರಂದು ತಹಸಿಲ್ದಾರ್, ಬಂಗಾರಪೇಟೆ ರವರು ಶ್ರೀ.ಡಿ.ಟಿ.ಉಮೇಶ, ಚೆನ್ನಪಟ್ಟಣ ಪೊಲೀಸ್ ವಸತಿ ಗೃಹ, ರಮನಗರ ಜಿಲ್ಲೆ ರವರು ಸಲ್ಲಿಸಿದ ಮಾ.ಹ.ಕಾ ಮನವಿಗೆ "ನನ್ನ ತಂದೆಯ ಜಾತಿ ಪ್ರಾಮಾಣ ಪತ್ರ ಸಂಬಂಧ ಪಟ್ಟ ದಾಖಲಾತಿ ಯಾವುವು ಈ ಕಛೇರಿಯಲ್ಲಿ ಲಭ್ಯವಿರುವುದಿಲ್ಲ" ಎಂದು ಉತ್ತರಿಸಿ ಬರೆದಿರುವ ಹಿಂಬರಹದ ಮೇರೆಗೆ ಆದೇಶೀಸಲಾಗಿದೆ.

1) ಶ್ರೀ.ಡಿ.ಟಿ.ಉಮೇಶ್ ಎಂಬ ವ್ಯಕ್ತಿ ಯಾರು ಮತ್ತು ಇವರು ಈ ಪ್ರಕರಣಕ್ಕೆ ಯಾವ ರೀತಯಲ್ಲಿ ಸಂಬಂಧಿತರಾಗಿರುತ್ತಾರೆ ಹಾಗೂ ನನ್ನ ತಂದೆಯ ಜಾತಿ ಪ್ರಾಮಾಣ ಪತ್ರಗಳ ದಾಖಲಾತಿ/ಮಾಹಿತಿ ಹೇಗೆ ಪಡೆದಿರುತ್ತಾರೆ?

2) ಶ್ರೀ.ಡಿ.ಟಿ.ಉಮೇಶ್ ರವರು ಉಪ ಆಯುಕ್ತರು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರಿಗೆ ಹೇಗೆ/ಯಾವ ರೀತಿಯಲ್ಲಿ ಸಂಬಂದಿಸಿದವರಾಗಿರುತ್ತಾರೆ?

3) ತಹಸಿಲ್ದಾರ್, ಬಂಗಾರಪೇಟೆ, ತಾ.ರವರು ಶ್ರೀ.ಡಿ.ಟಿ.ಉಮೇಶ್, ಚೆನ್ನಪಟ್ಟಣ ಪೊಲೀಸ್ ವಸತಿ ಗೃಹ, ರಾಮನಗರ ರವರುಗೆ ನೀಡಿರುವ ಹಿಂಬರಹ, ಉಪ ಆಯುಕ್ತರು ಬೆಂಗಳೂರು ರವರು ಕೈಗೆ ಸಿಕಿದು ಹೇಗೆ? ಈ ಮೂವರಿಗೂ (ಶ್ರೀ.ಡಿ.ಟಿ.ಉಮೇಶ್, ತಹಸಿಲ್ದಾರ್, ಬಂಗಾರಪೇಟೆ ಮತ್ತು ಉಪ ಆಯುಕ್ತರು, ಬೆಂಗಳೂರು) ಇರುವ ಸಂಬಂಧವೇನು?

4) ನಾ.ಜಾ.ಹ.ನಿ ಪ್ರಾಧಿಕಾರದವರು ನನ್ನ ವಿಚಾರಣೆಯ ಸಂದರ್ಭದಲ್ಲಿ ತಹಸಿಲ್ದಾರ್, ಬೆಂಗಳೂರು (ದ) ರವರಿಗೆ ನನ್ನ ದಾಖಲೆಗಳನ್ನು ಪಡೆಯಲು ಖುದ್ದಾಗಿ ಪತ್ರ ವ್ಯವಹರಿಸುವಾಗ, ನನ್ನ ತಂದೆಯವರ ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧ ಪಟ್ಟ ದಾಖಲಾತಿಗಳ ನೀಡಲುಕೋರಿ ಉಪ ಆಯುಕ್ತರವರು ಏಕೆ ತಹಸಿಲ್ದಾರ್, ಬಂಗಾರಪೇಟೆ,ರವರಿಗೆ ಖುದ್ದಾಗಿ/ನೇರವಾಗಿ ಪತ್ರ ಬರೆದಿರುವುದಿಲ್ಲ?

5) ತಹಸಿಲ್ದಾರ್, ಬಂಗಾರಪೇಟೆ ರವರು ಶ್ರೀ.ಡಿ.ಟಿ.ಉಮೇಶ್ ರವರ ಮಾ.ಹ.ಕಾ ಅಡಿಯಲ್ಲಿ ಸಲ್ಲಿಸಿದ ಮನವಿಗೆ ಮರುಉತ್ತರಿಸುವಾಗ ಏಕೆ ಶ್ರೀ.ಡಿ.ಟಿ.ಉಮೇಶ್ ರವರ ಮನವಿಯನ್ನು ಸ್ವೀಕರಿಸಿದ ದಿನಾಂಕವನ್ನು ನಮೂದಿಸಲ್ಲಿಲ?

ನಂತರದ ದಿನಾಂಕಗಳಲ್ಲಿ ನಾನು ಮಾ.ಹ.ಕಾ ಅಡಿಯ ಅರ್ಜಿಯಲ್ಲಿ ತಹಸಿಲ್ದಾರ್, ಬಂಗಾರಪೇಟೆ ರವರಿಗೆ ಯಾರಾದರು ನನ್ನ ತಂದೆಯವರ ಜಾತಿಗೆ ಸಂಬಂದಿಸಿದ ದಾಖಲಾತಿಗಳನ್ನು ಮಾ.ಹ.ಕಾ. ಅಡಿಯಲ್ಲಿ ಮಾಹಿತಿ ಪಡೆದಿದ್ದಾರೆಯೇ ಎಂದು ಕೋರಿದ್ದ ಮನವಿಗೆ ಅವರ ನೀಡಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶ್ರೀ.ಡಿ.ಟಿ.ಉಮೇಶ್ ಎಂಬ ವ್ಯಕ್ತಿಯು ಮಾ.ಹ.ಕಾ ಅರಡಿಯಲ್ಲಿ ಯಾವುದೇ ಮನವಿ ಸಲ್ಲಿಸಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

(1990 ಮತ್ತು 1993 ನೇ ಸಾಲಿನಲ್ಲಿ ಎಚ್.ಎ.ಎಲ್ ಸಂಸ್ಥೆಯವರು ಮುಖ ಪತ್ರದೊಂದಿಗೆ ನನ್ನ ತಂದೆಯವರ ಜಾತಿ ಪ್ರಮಾಣ ಪತ್ರವನ್ನು ಲಗತಿಸಿ ದೃಡೀಕರಣ ಕೋರಿ ಜಿಲ್ಲಾ ದಂಡಾಧಿಕಾರಿಗಳು, ಕೋಲಾರ ರವರಿಗೆ ಕಳುಹಿಸಿಲಾಗಿ, ಸದರಿಯವರು ತಹಸಿಲ್ದಾರ್, ಬಂಗಾರಪೇಟೆ ರವರಿಗೆ ಮುಂದಿನ ಜಾತಿ ವಿಚಾರಣೆಮಾಡಿ ವರದಿಯನ್ನು ನೀಡಲು ಕೋರಿರುತ್ತಾರೆ. ತದ ನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ಎಚ್.ಎ.ಎಲ್ ಸಂಸ್ಥೆಯವರು 14 ಜ್ಞಾಪನ ಪತ್ರಗಳನ್ನು ಜಿಲ್ಲಾ ದಂಡಾಧಿಕಾರಿಗಳು, ಕೋಲಾರ ರವರಿಗೆ ಕಳುಹಿಸಲಾಯಿತು. **ತಹಸಿಲ್ದಾರ್, ಬಂಗಾರಪೇಟೆ ರವರ ತನಿಖಾ ವರದಿಯ ಆಧಾರದ ಮೇರೆಗೆ ನನ್ನ ತಂದೆ ಪರಿಶಿಷ್ಟ ಜಾತಿಗೆ ಸೇರಿದರೆಂಬುದರ ಬಗ್ಗೆಯ ದೃಡೀಕರಣವನ್ನು ಎಚ್.ಎ.ಎಲ್ ಸಂಸ್ಥೆಯವರಿಗೆ ಜಿಲ್ಲಾ ದಂಡಾಧಿಕಾರಿಗಳು, ಕೋಲಾರ ರವರು 02 ಬಾರಿ ಕಳುಹಿಸಿರುತ್ತಾರೆ.)**

ಈ ಎಲ್ಲಾ ದಾಖಲಾತಿಗಳು ತಹಸಿಲ್ದಾರ್, ಬಂಗಾರಪೇಟೆ ರವರ ಸುಪರ್ದೀಘಿಯಲ್ಲಿ ಇರಬೇಕಾಗಿದೆ.

ನಾ.ಹ.ಜಾ.ನಿ. ಪ್ರಾಧಿಕಾರವು ನನ್ನನ್ನು ಸೇವೆಯಿಂದ ವಜಾಗೊಳಿಸುವಂತೆ ಶಿಫಾರಸ್ಸು ಮಾಡಿರುವ ಆದೇಶ/ನಡವಳಿಯನ್ನು ರದ್ದುಗೊಳಿಸುವಂತೆ **ದಿ:30.06.2014** ರಂದು **ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ** ನಾನು ಅರ್ಜಿ ಸಲ್ಲಿಸಿರುತ್ತೇನೆ.

ಅದೇ ದಿನಾಂಕದಂದು ಜಿಲ್ಲಾ ಸಮಾಜ ಕಲ್ಯಾಣ ಮಂಡಳಿಯವರು ದಿ:06.06.2014 ರಂದು ನೀಡಿರುವ ಸೂಚನೆಗೆ ಸಂಬಂಧಿಸಿ ಉಳಿದ ದಾಖಲಾತಿಗಳನ್ನು ಸದರಿ ಕಛೇರಿಯಲ್ಲಿ ಸಲ್ಲಿಸಿರುತ್ತೇನೆ.

ಯಾವುದೆ ವ್ಯಕ್ತಿಯನ್ನು ಕೇಳದೆ/ವಿಚಾರಣೆ ಮಾಡದೆ ಖಂಡಿಸುವ ಹಾಗಿಲ್ಲ ಹಾಗೂ ನಿಯಮನುಸಾರ, ಅರ್ಜಿದಾರರ ಪ್ರಕರಣವು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ತನಿಖೆಯಲ್ಲಿರುವಾಗ, ಅರ್ಜಿದಾರರ ಹೇಳಿಕೆ ಇಲ್ಲದೇ ಅರ್ಜಿದಾರರ ಪರವಾಗಿ ನೀಡಿರುವ ಜಾತಿ ಪತ್ರ ವನ್ನು ಹಿಂಪಡೆದು ರದ್ದುಗೊಳಿಸುವತನಕ, ಎಚ್.ಎ.ಎಲ್ ಸಂಸ್ಥೆಯು ಯಾವುದೇ ಕ್ರಮ ಕೈಗೊಳ್ಳುವುದು ಸೂಕ್ತವಲ್ಲ ಎಂದು **ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿ: 01.07.2014** ರ ತಮ್ಮ ತೀಪಿನಲ್ಲಿ ಇತ್ಯರ್ಥ ಪಡಿಸಿರುತ್ತಾರೆ.

ನಾ.ಹ.ಜಾ.ನಿ.ರವರ ಕಛೇರಿಯ **ಶಾಖಾಧೀಕ್ಷಕರು ದಿ: 01.07.2014** ರಂದು ತಮ್ಮ ಕಛೇರಿಯ ಟಿಪ್ಪಣಿಯಲ್ಲಿ "ದಿ:25.05.2014 ರಂದು ಉಪ ಆಯುಕ್ತರು (ಜಿ.ಜಾ.ಪ.ಸ) ನಾನು "ಆದಿ ದ್ರಾವಿಡ" ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಅಸಿಂಧು ಎಂದು ಹಾಗೂ ನಾನು ನನ್ನ ಜಾತಿ ಪ್ರಮಾಣ ಪತ್ರವನ್ನು ಸೃಷ್ಠೀಸಿಕೊಂಡಿರುವುದಾಗಿ ಆದೇಶವನ್ನು ಹೋರಡಿಸಿರುತ್ತಾರೆ"ಎಂಬ ಹೀನ್ನೆಲೆಯಲ್ಲಿ ನನ್ನನ್ನು ಎಚ್.ಎ.ಎಲ್ ಸಂಸ್ಥಯಿಂದ ವಜಾಗೊಳಿಸುವಂತೆ ಮಂಡಿಸಿರುತ್ತಾರೆ.

ಅದೇ **ದಿ:01.07.2014** ರಂದು ಕಛೇರಿಯ **ಆಡಳಿತಾಧಿಕಾರಿಗಳು,** ನಾ.ಹ.ಜಾ.ನಿ.ರವರು ನನ್ನನ್ನು ಎಚ್.ಎ.ಎಲ್ ಸಂಸ್ಥೆಯಿಂದ ವಜಾಗೊಳಿಸುವಂತೆ ಕಛೇರಿಯ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿ ಮುಂದಿನ ಕ್ರಮಕ್ಕಾಗಿ ಮಂಡಿಸಿರುತ್ತಾರೆ.

ಅದೇ **ದಿ:01.07.2014** ರಂದು **ಉಪ ಪೊಲೀಸ್ ಮಹಾನಿರೀಕ್ಷಕರು,** ನಾ.ಹ.ಜಾ.ನಿ.ರವರು ನನ್ನನ್ನು ಎಚ್.ಎ.ಎಲ್ ಸಂಸ್ಥೆಯಿಂದ ವಜಾಗೊಳಿಸುವಂತೆ ಕಛೇರಿಯ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿ ಮುಂದಿನ ಕ್ರಮಕ್ಕಾಗಿ ಮಂಡಿಸಿರುತ್ತಾರೆ.

ಅದೇ **ದಿ:01.07.2014** ರಂದು **ಹೆಚ್ಚುವರಿ ಪೊಲೀಸ್ ಮಹಾನಿದೇಶಕರು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ಕಛೇರಿ ಟಿಪ್ಪಣಿಯಲ್ಲಿ ನನ್ನನ್ನು ಎಚ್.ಎ.ಎಲ್ ಸಂಸ್ಥೆಯಿಂದ ವಜಾಗೊಳಿಸುವ ಶಿಫಾರಸ್ಸಿಗೆ ಅನುಮೋದನೆ ನೀಡಿರುತ್ತಾರೆ.

ಅದೇ ದಿನ **ದಿ: 01.07.2014** ರಂದು **ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರವರು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯರವರು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರ ಆದೇಶ ಲಗತಿಸಿ ನನ್ನನ್ನು ಎಚ್.ಎ.ಎಲ್ ಸಂಸ್ಥೆಯಿಂದ ವಜಾಗೊಳಿಸುವಂತೆ ಶಿಫಾರಸ್ಸು ಪತ್ರಕ್ಕೆ ಸಹಿಯನ್ನು ಮಾಡುತ್ತಾರೆ.

ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಕಛೇರಿಯ ಸಿಬ್ಬಂದಿಯವರೋದಿಗೆ ಮುದ್ದಾಂ ಟಪಾಲು ಮೂಲಕವಾಗಿ **ದಿ:01.07.2014** ರಂದೇ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರವರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯರವರ ಮಾಡಿದ ಶಿಫಾರಸ್ಸು ಪತ್ರವನ್ನು ಎಚ್.ಎ.ಎಲ್ ಸಂಸ್ಥಗೆ ತಲುಪಿಸಿರುತ್ತಾರೆ.

**(ಶಿಫಾರಸ್ಸು ಪತ್ರವನ್ನು ನೊಂದಾಯಿತ ಅಂಚೆ ಮೂಲಕ ರವಾನಿಸದೇ ಮುದ್ದಾಂ ಟಪಾಲು ಮೂಲಕ ಕಳುಹಿಸಿದು ಏಕೆ ಮತ್ತೆ ಅದೇ ದಿನಾಂಕ ದಂದು ತಲುಪಿಸಿದ ಅತುರತೆ/ಅತ್ಯವಸರ/ತುರ್ತು ಪರಿಸ್ಥಿತಿ ಏನಿತ್ತು?)**

ಅದೇ ದಿನ ದಿ: **01.07.2014** ರಂದೇ **ಉಪ ಪೊಲೀಸ್ ಮಹಾನಿರೀಕ್ಷಕರು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯರವರ ಮೌಖಿಕ ಆದೇಶದನ್ವಯ, ಕಛೇರಿಯ ಗುಮಾಸ್ತರು ಸಿಬ್ಬಂದಿಯವರು ನನ್ನ ವಿರುದ್ಧ ಅಪರಾಧ ನಡವಳಿ ಜರುಗಿಸಬೇಕು ಎಂದು ಕಛೇರಿಯ ಟಿಪ್ಪಣಿ ಮಂಡಿಸಿರುತ್ತಾರೆ.

ಅದೇ ದಿನ **ದಿ:01.07.2014** ರಂದು **ಶಾಖಾಧೀಕ್ಷಕರಿಗಳು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯರವರು ನನ್ನ ವಿರುದ್ದ ಅಪರಾಧ ನಡವಳಿ ಜರುಗಿಸಬೇಕು ಎಂದು ಕಛೇರಿಯ ಟಿಪ್ಪಣಿ ಮಂಡಿಸಿರುತ್ತಾರೆ.

ಅದೇ ದಿನ **ದಿ:01.07.2014** ರಂದು **ಉಪ ಪೊಲೀಸ್ ಮಹಾನಿರೀಕ್ಷಕರು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ನನ್ನ ವಿರುದ್ದ ಅಪರಾಧ ನಡವಳಿ ಜರುಗಿಸಬೇಕು ಎಂದು ಕಛೇರಿಯ ಟಿಪ್ಪಣಿ ಮಂಡಿಸಿರುತ್ತಾರೆ.

ಅದೇ **ದಿ:01.07.2014** ರಂದು **ಹೆಚ್ಚುವರಿ ಪೊಲೀಸ್ ಮಹಾ ನಿರೀಕ್ಷಕರು,** ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ನನ್ನ ವಿರುದ್ಧ ಅಪರಾಧ ನಡವಳಿ ಜರುಗಿಸಬೇಕು ಎಂದು ಮಂಡಿಸಿದ ಶಿಫಾರಸ್ಸನ್ನು ಕಛೇರಿಯ ಟಿಪ್ಪಣಿಯಲ್ಲಿ ಅನುಮೋದಿಸಿರುತ್ತಾರೆ.

ಅದೇ ದಿನ **ದಿ:01.07.2014** ರಂದು **ಪೊಲೀಸ್** ಉಪ ನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯರವರು ನನ್ನ ವಿರುದ್ಧ ಐ.ಪಿ.ಸಿ **420, 465, 468** ಮತ್ತು **471** ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿ ನಮೂದಿಸುವಂತೆ ಹಸಲಸೂರು ಗೇಟ್ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ, ಅದೇ ದಿನಾಂಕದಂದು **ದಿ:01.07.2014** ರಂದು ಸಂಜೆ 06:30 ಕ್ಕೆ **ಠಾಣಾಧಿಕಾರಿ,** ಹಸಲಸೂರು ಗೇಟ್ ಪೊಲೀಸ್ ಠಾಣೆ ನನ್ನ ವಿರುದ್ಧ **ಐ.ಪಿ.ಸಿ 420, 465, 468** ಮತ್ತು **471** ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲು ಮಾಡಿರುತ್ತಾರೆ.

ಅದೇ **ದಿ:01.07.2014** ರಂದು ಸಂಜೆ 07:00 ಕ್ಕೆ ಎಚ್.ಎ.ಎಲ್ ಸಂಸ್ಥೆಯಿಂದ ಸೇವೆಯಿಂದ ನನ್ನನು ವಜಾಗೊಳಿಸಿದುರವುದಾಗಿ ಪತ್ರವನ್ನು ಎಚ್.ಎ.ಎಲ್ ಸಂಸ್ಥೆಯವರು ನನಗೆ ಜಾರಿ ಮಾಡಿರುತ್ತಾರೆ.

**(ಎಚ್.ಎ.ಎಲ್ ಸಂಸ್ಥೆಯಲ್ಲಿ ಎಂದೂ ಅರಿಯದ, ಇತಿಹಾಸದಲ್ಲೇ ಮೊದಲನೇ ಬಾರಿ ಎಚ್.ಎ.ಎಲ್‌ನ ಒಬ್ಬ ಕಾರ್ಮಿಕನನ್ನು ತಾರತುರಿಯಿಂದ ಹಾಗೂ ಯಾವುದೆ ಸೂಚನಾ ಪತ್ರವನ್ನು ನೀಡದೆ ಸೇವೆಯಿಂದ ವಜಾಗೊಳಿಸುವ ಹೀನ ಕೃತ್ಯ ಮಾಡಿರುತ್ತಾರೆ.)**

ಆದಗಿಯೂ ಮಾನ್ಯ ಸುಪ್ರೀಂಕೋರ್ಟ್ ಕೂಡ ಇದೇ ರೀತಿಯ ಜಾತಿ ಪರಿಶೀಲನೆ ಪ್ರಕರಣದಲ್ಲಿ ಅಂದರೆ ಶ್ರೀ.ವಿಶ್ವನಾಥ ಪಿಳ್ಳೈ Vs ಕೇರಳ ಸರ್ಕಾರ ಮತ್ತು ಇತರರ ಪ್ರಕರಣದಲ್ಲಿ ದಿ:07.01.2004 (2004 A/R 1469 2004 (1) SCR 360) ನೀಡಲಾದ ತೀರ್ಪಿನಲ್ಲಿ ಸೂಚನಾ ಪತ್ರ ನೀಡುವ ಅಗತ್ಯತೆ ಇರದಿದ್ದರೂ ಸಹ ಗಮನಿಸಬೇಕಾದ ಅಂಶವೇನೆಂದರೆ (2) ಎರಡು ಪ್ರತ್ಯೇಕ ಜಾತಿ ಪರಿಶೀಲನೆ ಪ್ರಕರಣದಲ್ಲಿ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಿಮದ ಋಣಾತ್ಮಕ ವರದಿಯನ್ನು ಸ್ವೀಕರಿಸಿದರು ಸಹಾ ಎಚ್.ಎ.ಎಲ್ ಆಡಳಿತ ಮಂಡಳಿಯವರು ಸೇವೆಯಿಂದ ವಜಾ ಯಾಕೆ ಮಾಡಬಾರು ಎಂಬ ಕಾರಣ ನೀಡಲು ಸದರಿ ವ್ಯಕ್ತಿಗಳಿಗೆ ಕೋರಿ ಸೂಚನೆಯನ್ನು ನೀಡಿರುತ್ತಾರೆ.

(1) ಮೊದಲನೇ ಪ್ರಕರಣದಲ್ಲಿ, ದಿ:06.11.2008 ರಂದು ಹೆ.ಪೊ.ಮ.(ನಾ.ಹ.ಜಾ.ನಿ)ರವರು ಎರೋ ಇಂಜಿನ್ ವಿಭಾಗದ ಸಿಬ್ಬಂದಿ ಒಬ್ಬರನ್ನು ಸೇವೆಯಿಂದ ವಜಾ ಮಾಡುವಂತೆ ಶಿಫಾರಸ್ಸು ಪತ್ರ ಸ್ವೀಕರಿಸಿದ ನಂತರ ದಿ:14.11.2008 ರಂದು ಎಚ್.ಎ.ಎಲ್ ಸೇವೆಯಿಂದ ಯಾಕೆ ವಜಾಗೊಳಿಸಬಾರದು ಎಂಬುದಕ್ಕೆ ಕಾರಣ ನೀಡಲು ಕೋರಿ ಸದರಿ ವ್ಯಕ್ತಿಗೆ ಸೂಚನೆಯನ್ನು ಜಾರಿ ಮಾಡಿರುತ್ತಾರೆ.(WP 14600/2008)

(2)ಇತ್ತೀಚಿಗೆ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ, ಮಂಡ್ಯ ರವರ ದಿ; 16.11.2009 ಋಣಾತ್ಮಕ ವರದಿಯನ್ನು ಸ್ವೀಕರಿಸಿದ ನಂತರ; ಎಚ್.ಎ.ಎಲ್ ಸಂಸ್ಥೆಯು ಸುಮಾರು ನಾಲ್ಕು ವರೆ ವರ್ಷಗಳ ನಂತರ, ದಿ: 24.06.2013 ರಂದು ಸಂಬಂಧಿತ ಸಿಬ್ಬಂದಿಗೆ ಸೇವೆಯಿಂದ ವಜಾ ಯಾಕೆ ಮಾಡಬಾರದು ಎಂಬ ಕಾರಣನೀಡಲು ಕಾರಣ ನೀಡಲು ಕೋರಿ ಸೂಚನೆಯನ್ನು ಜಾರಿ ಮಾಡಿರುತ್ತಾರೆ. (WP 29850/2014)

**ಪ್ರಕರಣಗಳು ಹೀಗಿರುವಾಗ, ಎಚ್.ಎ.ಎಲ್ ಸಂಸ್ಥೆಯವರು ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದಕ್ಕೆ ಸುಣ್ಣ ಎಂಬಂತೆ ಪ್ರತ್ಯೇಕ ತೀರ್ಪು ತೆಗೆದು ಯಾವುದೇ ಕಾರಣ ಕೇಳದೇ ಸೂಚನೆ ನೀಡದೇ ಎಚ್.ಎ.ಎಲ್ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ ನನ್ನನ್ನು ಸೇವೆಯಿಂದ ವಜಾಯಾಕೆ ಮಾಡಿದರು?**

ಪುನ: ಅದೇ **ದಿ:01.07.2014** ರಂದು **ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,** ನಾಗರೀಕ ಹಕ್ಕು ಜಾರಿನಿರ್ದೇಶನಾಲಯ ರವರು ನನ್ನ ತಂದೆಯವರ ವಿರುದ್ಧ ಅಪರಾಧ ನಡವಳಿ ಕ್ರಮ ಕೈಗೊಳ್ಳುವಂತೆ **ಪೊಲೀಸ್** ಅಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರಿಗೆ ಸೂಚಿಸುತ್ತರೆ.

ಅದೇ **ದಿ:01.07.2014** ರಂದು ನಾನು ನನ್ನ ಕುಟುಂಬವರ್ಗದವರನ್ನು ಬಿಟ್ಟು ತಲೆಮಾರೆಯಾದೆ.

ದಿ: **02.07.2014** ರಂದು ಉಪ ಪೊಲೀಸ್ ಮಹಾನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ನನ್ನ ಸಹೋದರರ ಹಾಗೂ ನನ್ನ ಮಕ್ಕಳ ಜಾತಿ ಪರಿಶೀಲನೆಮಾಡಲು ಕೋರಿ ಪೊಲೀಸ್ ಅಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರಿಗೆ ಪತ್ರ ಬರೆದಿರುತ್ತಾರೆ.

ಅದೇ ದಿನ ದಿ: **02.07.2014** ನನ್ನ ಇರುವಿಕೆ/ಉಪಸ್ಥಿತಿಯ ಬಗ್ಗೆ ಪೊಲೀಸ್ ಉಪಾಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರು ನನ್ನ ನಿವಾಸದ ಬಳಿ ತನಿಖೆ ಮಾಡಿರುತ್ತಾರೆ, ಮುಂದಿ ದಿನಗಳಲ್ಲೂ ನನ್ನನು ಹೂಡುಕುತ್ತಾ ನನ್ನ ನಿವಾಸದ ಬಳಿ ಬರುತ್ತಾರೆ.

ಅದೇ ದಿನ ದಿ: **02.07.2014** ನನ್ನನ್ನು ಎಚ್.ಎ.ಎಲ್ ಸಂಸ್ಥೆಯ ಸೇವೆಯಿಂದ ವಜಾ ಮಾಡಿದ ಬಗ್ಗೆ ಎಚ್.ಎ.ಎಲ್ ಸಂಸ್ಥೆಯವರು ಮುಖ್ಯ ವ್ಯವಸ್ಥಾಪಕರು (ಮಾ.ಸಂ) ದುರಸ್ಥಿ ವಿಭಾಗ, ಎಚ್.ಎ.ಎಲ್ ರವರು ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ಲಿಖಿತ ಮಾಹಿತಿ ನೀಡಿರುತ್ತಾರೆ.

ಅದೇ ದಿನ ದಿ: **02.07.2014** ರಂದು ಕಾರ್ಯದರ್ಶಿಗಳು, ಜಿಲ್ಲಾ ಸಮಾಜ ಕಲ್ಯಾಣ ಮಂಡಳಿಯ ಅಧಿಕೃತವಾಗಿ ನನ್ನ ಜಾತಿ ಪ್ರಮಾಣ ಪತ್ರ ರದ್ದುಮಾಡಿದ ಉಪ ಆಯುಕ್ತರು ಜಿ.ಜಾ.ಪ.ಸ ರವರ ದಿ: 25.06.2014 ರ ಆದೇಶದ ಪ್ರತಿಯನ್ನು ನೊಂದಾಯಿತ ಅಂಚೆ ಮೂಲಕ ನನ್ನ ವಿಳಾಸಕ್ಕೆ ಕಳುಹಿಸಿರುತ್ತಾರೆ.

ಎಚ್.ಎ.ಎಲ್ ಆಡಳಿತ ಮಂಡಳಿಯವರು **ದಿ: 03.07.2014** ರಂದು ಕೇವ್ಟ್ ನೋಟೀಸನ್ನು ನನ್ನ ನಿವಾಸದ ವಿಳಾಸಕ್ಕೆ ಕಳುಸಿದ್ದಾರೆ.

ನನ್ನನ್ನು ಎಚ್.ಎ.ಎಲ್ ಸೇವೆಯಿಂದ ವಜಾಗೊಳಿಸಿರುವುದರ ಬಗ್ಗೆ ನಾನು ಪ್ರಶ್ನಿದಲ್ಲಿ ಎಚ್.ಎ.ಎಲ್ ಸಂಸ್ಥೆಯನ್ನು ಪಾರ್ಟಿ ಮಾಡಿ ಮಾನ್ಯ ಉಚ್ಚಾ ನ್ಯಾಯಾಉಯ ಸದರಿಯವರನ್ನು ಅವರ ಅಭಿಪ್ರಾಯವನ್ನು / ವಾದವನ್ನು ಕೇಳಿದ ನಂತರವೇ ಆದೇಶವನ್ನು ಹೋರಪಡಿಸತಕ್ಕದು.

**(ಜಾತಿ ಪರಿಶೀಲನಾ ವರದಿಯ ಮೇರೆಗೆ ವಜಾಗೊಳಿಸಲಾದ ಆದೇಶದ ಸಂಬಂಧ ಎಚ್.ಎ.ಎಲ್ ಸಂಸ್ಥೆಯವರು ಬಹಳ ಉತ್ಸಾಹವನ್ನು ಪ್ರದರ್ಶಿಸಿ ವ್ಯಯಕ್ತಿಕವಾಗಿ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಲಾದ ಕೇವ್ಟ್ ಅರ್ಜಿಯು ಪ್ರಪ್ರಥಮ ದಾವೆಯಾಗಿದೆ)**

ದಿ: **04.07.2014** ರಂದು ನನ್ನನು ಸೇವೆಯಿಂದ ವಜಾ ಮಾಡಿರುವ ಕುರಿತು ವರದಿಯನ್ನು ಮುನ್ನಡೆಯಲ್ಲಿರುವ ಕನ್ನಡ ದೈನಿಕ ವಾಣಿ/ಪತ್ರ **“ಕನ್ನಡ ಪ್ರಭ”** ದಲ್ಲಿ ಪ್ರಕಟಿಸಿರುತ್ತಾರೆ.

**ದಿ:08.07.2014** ಎಚ್.ಎ.ಎಲ್ ಸಂಸ್ಥೆಯ ಆಡಳಿತ ಮಂಡಳಿಯು ಸಂಸ್ಥೆಯಿಂದ ಹಂಚಿಕೆಯಾಗಿರುವ ವಸತಿ ಗೃಹವನ್ನು ತೆರವು ಮಾಡುವಂತೆ ಸೂಚನಾ ಪತ್ರವನ್ನು ನನ್ನ ವಿಳಾಸಕ್ಕೆ ಕಳುಹಿಸಲಾಯಿತ್ತು. ತದ ನಂತರದ ದಿನಗಳಲ್ಲಿ ಇದೇ ರೀತಿಯ ಸೂಚನಾ ಜ್ಞಾಪನಗಳು ಹಚ್ಚಾಗುತ್ತಾ ಹೋದವು.

**(ಸೇವೆಯಿಂದ ವಜಾ ಮಾಡಲಾದ ಒಂದೇ ವಾರದಲ್ಲಿ ಎಚ್.ಎ.ಎಲ್ ಸಂಸ್ಥೆಯ ಆಡಳಿತ ಮಂಡಳಿಯವರು ವಸತಿ ಗೃಹವನ್ನು ತೆರವು ಮಾಡಲು ಸೂಚನೆ ನೀಡಿರುವುದು ಇದೇ ಮೊದಲನೇಯದು)**

**ದಿ:09.07.2014** ರಂದು ಸಿಟಿ ಫಾಸ್ಟ್ ಟ್ರ್ಯಾಕ್ ಕೋರ್ಟ್–4ರ ಮುಂದೆ ನನ್ನ ಜಾಮೀನು ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಯಿತು, ವಾದ–ವಿವಾದವನ್ನು ಆಲಿಸಿದ ನ್ಯಾಯಾಲಯವು ಆದೇಶವನ್ನು ದಿ:15.07.2014ಕ್ಕೆ ಕಾಯ್ದಿರಿಸಲಾಯಿತು.

ನ್ಯಾಯಾಲಯದಲ್ಲಿ ಹಾಜರಿದ್ದ ನಾ.ಹ.ಜಾ.ನಿದ ಸಿಬ್ಬಂಧಿಗಳು ನ್ಯಾಯಾಲಯವು ನನಗೆ ಜಾಮೀನು ನೀಡುವುದನ್ನು ನಿರೀಕ್ಷಿಸುತ್ತಾ **ದಿ:11.07.2014** ರಂದು ಶ್ರೀ.ಮಲ್ಲಿಕಾರ್ಜುನ, ಇನ್ಸ್ಪೆಕ್ಟರ್, (ನಾ.ಹ.ಜಾ.ನಿ)ರವರು ಹೆಚ್ಚುವರಿಯಾಗಿ ಇನ್ನೂ (08) ಕಾಯ್ದೆಗಳನ್ನು ಐ.ಪಿ.ಸಿ 120ಬಿ, 177, 181, 198, 201 419, 466 ಮತ್ತು 3ಷರತ್ತು (I) (IX) ಎಸ್ಸಿ/ಎಸ್ಟಿ ಪಿಓಎಸ್ ರ ಅಡಿಯಲ್ಲಿ ಎಫ್.ಐಆ.ರ್ ಗೆ ಸೇರಿಸಿ ಕೋರಿ ಒಂದು ಜ್ಞಾಪನವನ್ನು ಮಾನ್ಯ 6ನೇ ಎ.ಸಿ.ಮ್.ಮ್ ನ್ಯಾಯಾಲಯದ ಮುಂದೆ ಸಲ್ಲಿಸುತ್ತಾ ನನ್ನ ಪ್ರಕರಣವನ್ನು ಸಿ.ಸಿ.ಹೆಚ್–17 (ಎಸ್ಸಿ/ಎಸ್ಟಿ)ಗೆ ವರ್ಗಾವಣೆ ಮಾಡಬೇಕೇಂದು ಮನವಿಯನ್ನು ಸಲ್ಲಿಸಿದರು.

(1) ಈಗಾಗಲೇ ದಿ:01.07.2014ರಂದೇ ಸಬ್ ಇನ್ಸ್ಪೆಕ್ಟರ್ (ನಾ.ಹ.ಜಾ.ನಿ)ರವರು ಲಿಖಿತವಾಗಿ ಇನ್ಸ್ಪೆಕ್ಟರ್ ಹಲಸೂರು ಪೊಲೀಸ್ ಠಾಣೆಗೆ ಪತ್ರ ಬರೆದು ನನ್ನ ವಿರುದ್ಧ ಐ.ಪಿ.ಸಿ 420, 465, 468 ಮತ್ತು 471 ರ ಅಡಿಯಲ್ಲಿ ಎಫ್.ಐ.ಆರ್ ನ್ನು ದಾಖಲಿಸಲು ಕೋರಿರುವಾಗ, **ಸದರಿರವರು ಅದೆ ದಿನವೇ ಸದರಿ ಮನವಿಯಲ್ಲೇ ಹೆಚ್ಚುವರಿ ಕಾಯ್ದಿಗಳನ್ನು ಅಂದರೆ ಐ.ಪಿ.ಸಿ 120ಬಿ, 177, 181, 198, 201 419, 466 ಮತ್ತು 3ಷರತ್ತು (I) (IX) ಎಸ್ಸಿ/ಎಸ್ಟಿ ಪಿಓಎಸ್ ವನ್ನು ಅದೆ ದಿನ ಏಕೆ ಸೇರಿಸಲ್ಲಿಲ?**

(2) ದಿ:09.07.2014 ರಂದು ನನ್ನ ಜಾಮೀನು ವಿಚಾರಣೆಯು ಮುಗಿದ ನಂತರವೆ **ಸದರಿಯವರು ಯಾವ ಕರಣಕ್ಕಾಗಿ ಮೇಲೆ ಹೇಳಿರುವ 08 ಹೆಚ್ಚುವರಿ ಕಾಯ್ದಿಗಳನ್ನು ಸೇರಿಸಿದರು?**

(3) 01.07.2014 ರಂದು 4 ಐಪಿಸಿ ಕಾಯ್ದಿಗಳೊಂದಿಗೆ ಏಫೈಆರ್ ಈಗಾಗಲೇ ನನ್ನ ಮೇಲೆ ಸಲ್ಲಿಸಿದ ನಂತರ, **ಮತ್ತಷ್ಟು ತನಿಖೆಗಳು ಮತ್ತು ಪುರಾವೆಗಳನ್ನು ನಡೆಸದೆ,** ಸದರಿಯವರಿಗೆ ಹೆಚ್ಚುವರಿಯಾಗಿ 8 ಕಾಯ್ದಿಗಳನ್ನು ಮತ್ತೆ ಸೇರಿಸುವ ಅಗತ್ಯತೆ ಏನು?

(4) "ಕರ್ನಾಟಕ ಎಸ್ಸಿ / ಎಸ್ಟಿ ಮತ್ತು ಒ.ಬಿ.ಸಿ (ನೇಮಕಾತಿಗಳ ಮೀಸಲಾತಿ ಇತ್ಯಾದಿ) ಕಾಯ್ದಿ 1990 ನ ಪರಿಚ್ಛೇದ 6" ಪರಿಚ್ಛೇದ 6: ಅಪರಾಧಗಳ ಅರಿವಿದರು ಸಹಾ :– ಈ ಅಧಿನಿಯಮದ ಅಡಿಯಲ್ಲಿ ಅಪರಾಧಕ್ಕಾಗಿ ರಾಜ್ಯ ಸರ್ಕಾರದ ಅನುಮೋದನೆ ಇಲ್ಲದೆ ಯಾವುದೇ ಕಾನೂನು ಜಾರಿಗೊಳಿಸಬಾರದು ಅಥವಾ ಸ್ಥಾಪಿಸಬಾರದು. **ಹಾಗಿದ್ದಲ್ಲಿ ನಾ.ಹ.ಜಾ.ನಿ ದ ಅಧಿಕಾರಿಗಳು ಅನುಮತಿಯನ್ನು ಪಡೆದಿದ್ದರೆಯೇ?**

(5) ಪರಿಚ್ಛೇದ 7 ರ ಎಸ್ಸಿ / ಎಸ್ಟಿ (ಪಿಓಎ)ದ ನಿಯಾಮಗಳ ಅಡಿಯಲ್ಲಿ ಯಾವು ಅಪರಾಧ ಈ ಕಾಯ್ದಿಯ ಅಡಿಯಲ್ಲಿ ನಡೆದಿರುವಾಗ ಅದನ್ನು ಉಪ ಪೊಲೀಸ್ ಅಧೀಕ್ಷಕರಿಗಿಂತಾ ಕೆಳ ಅಧಿಕಾರಿಗಳು ತನಿಖೆಯನ್ನು ನಡೆಸಬಾರದು ಎಂದು ಸ್ಪಷ್ಟವಾಗಿ ಸೂಚಿಸಿರುವಾಗ, **ಏಕಾಗಿ ಸದರಿ ಇನ್ಸ್ಪೆಕ್ಟರ್‌ರವರು ನನ್ನ ಮೇಲೆ 3ಷರತ್ತು (I) (IX) ಎಸ್ಸಿ/ಎಸ್ಟಿ ಪಿಓಎಸ್ ಒಳಗೊಂಡ ಜ್ಞಾಪನೆಯನ್ನು ಸಲ್ಲಿಸಿದರು?**

ದಿ: 15.07.2014 ರಂದು

ಸಿಟಿ ಫಾಸ್ಟ್ ಟ್ರ್ಯಾಕ್ ಕೋರ್ಟ್–4

ನನಗೆ ನಿರೀಕ್ಷಿತ ಜಾಮೀನು ನೀಡುತ್ತಾರೆ.

**ದಿ:16.07.2017**

ನಾನು ಮನೆಗೆ ಮರಳಿದೆ.

**ದಿ:02.08.2014** ರಂದು ಶ್ರೀ. ಮಲ್ಲಿಕಾರ್ಜುನ, ಇನ್ಸ್ಪೆಕ್ಟರ್ (ನಾ.ಹ.ಜಾ.ನಿ) ರವರು ಸಿ.ಸಿಹೆಚ್–17 ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ನನ್ನ ವಿರುದ್ಧ ಬಂಧನ ವಾರಂಟ್ ನೀಡಬೇಕೆಂದು ಕೋರುತ್ತಾರೆ, ಸದರಿಯನ್ನು ಕೋರುವಾಗ ಅವರು ನನ್ನ ಶಾಲಾ ದಾಖಲೆಗಳನ್ನು ಪಡೆಯಬೇಕು ಹಾಗೂ  ನನ್ನ ಸಹೋದರರ ಹೇಳಿಕೆಯನ್ನು ಪಡೆಯಬೇಕು ಮತ್ತು ನನ್ನ ಜಾತಿ ಪ್ರಾಮಾಣಪತ್ರವನ್ನು ಅಮಾನತ್ತುಪಡಿಸಬೇಕು ಎಂದು ಮಾನ್ಯ ನ್ಯಾಯಾಲಯದ ದಾರಿಯನ್ನು ತಪ್ಪಿಸಿರುತ್ತಾರೆ.

ಗಮನಿಸಬೇಕಾದ ವಿಷಯಂದರೆ, ನನ್ನ ಜಾತಿ ವಿಚಾರಣೆಯ ಸಮಯದಲ್ಲಿ ತನಿಖಾಧಿಕಾರಿಗಳು ಈಗಾಗಲೇ ನನ್ನ ಮತ್ತು ನನ್ನ ಸಹೋದರರ ಸಂಪೂರ್ಣ ಶಾಲಾ ದಾಕಲಾತಿಗಳು ಮತ್ತು ಹೇಳಿಕೆಗಳನ್ನು ಪಡೆದಿರುತ್ತಾರೆ, ಆದ್ದರಿಂದ ಶ್ರೀ. ಮಲ್ಲಿಕಾರ್ಜುನ ಇನ್ಸ್ಪೆಕ್ಟರ್ (ನಾ.ಹ.ಜಾ.ನಿ) ರವರ ಹೇಳಿಕೆಗಳು ಆಧಾರರಹಿತವಾಗಿದೆ ಮತ್ತು ಸುಳ್ಳುಗಳಾಗಿವೆ.

**ಈ ಎಲ್ಲಾ ಶೇಖರಿಸಿದ ಮೂಲ ದಾಖಲಾತಿಗಳು ಇನ್ನೂ ಅವರ ಅಧೀನದಲ್ಲೇ ಇವೆ.**

**ದಿ:04.08.2014** ರಂದು ಶ್ರೀ. ಮಲ್ಲಿಕಾರ್ಜುನ, ಇನ್ಸ್ಪೆಕ್ಟರ್ (ನಾ.ಹ.ಜಾ.ನಿ)ರವರು ಸಲ್ಲಿಸಿದ ಆಧಾರದ ಮೇರೆಗೆ, ಸೆಷನ್ಸ್ ಕೋರ್ಟ್ (ಸಿ.ಸಿ.ಹೆಚ್–17) ಜಾಮೀನು ರಹಿತ ವಾರಂಟನ್ನು ಜಾರಿ ಮಾಡಿ ಸದರಿ ಆದೇಶವನ್ನು ದಿ:16.08.2014 ಒಳಗೆ ಕಾರ್ಯಗತಗೊಳಿಸಬೇಕೆಂದು ತಿಳಿಸುತ್ತಾರೆ.

**ದಿ:12.08.2014** ರಂದು ನನ್ನ ಕಿರಿಯ ಸಹೋದರು ಹೆ.ಪೊ.ಮ (ನಾ.ಹ.ಜಾ.ನಿ) ರವರಿಗೆ ಒಂದು ಲಿಖಿತ ಮನವಿಯನ್ನು ಸಲ್ಲಿಸಿ ಸದರಿ ಮನವಿಯಲ್ಲಿ ಅವರ ವಿರುದ್ಧ ಜಾತಿ ವಿಚಾರಣೆ ಕುರಿತು ಯಾವುದಾದರು ದೂರುಗಳು ಹಾಗೂ ಅದಕ್ಕೆ ಸಂಬಂಧ ಪಟ್ಟ ದಾಖಲಾತಿಗಳನ್ನು ನಾ.ಹ.ಜಾ.ನಿ ರವರು ಸ್ವೀಕರಿಸಿದಲ್ಲಿ ಸದರಿ ದಾಖಲಾತಿಗಳನ್ನು ನೀಡಲು ಕೋರಿರುತ್ತಾರೆ. ಮುಂದಿನ ದಿನಗಳಲ್ಲಿ, ಇದೆ ತರದ ಮನವಿಗಳನ್ನು ನಾ.ಹ.ಜಾ.ನಿ ಬೇರೆ ಅಧಿಕಾರಿಗಳಿಗೂ ನೀಡಿರುತ್ತಾರೆ ಅದರೆ ಸದರಿ ಮನವಿಯನ್ನು ಅವರು ಪರಿಗಣಿಸುವುದಿಲ್ಲ.

**ದಿ:16.08.2014ರಂದು** ಶ್ರೀ. ಮಲ್ಲಿಕಾರ್ಜುನ ಇನ್ಸ್ಪೆಕ್ಟರ್ (ನಾ.ಹ.ಜಾ.ನಿ)ರವರು ನನ್ನನ್ನು ದೂರವಾಣಿ ಮೂಲಕ ಸಂರ್ಪಕಿಸಿ ನನ್ನ ಹೇಳಿಕೆಯನ್ನು ಪಡೆಯುವಸಲುವಾಗಿ ನನ್ನನು ನಾ.ಹ.ಜಾ.ನಿರವರ ಕೆ.ಜಿ ರಸ್ಥೆ ಗೆ ಬರುವಂತೆ ತಿಳಿಸುತ್ತಾರೆ. ಸುಮಾರು 11.00ಘಂಟೆಗೆ ನಾನು ನಿಗದಿತ ಸ್ಥಳಕ್ಕೆ ತಲುಪಿದಾಗ ಸದರಿಯವರು ಉಪ ಪೊಲೀಸ್ ನಿರೀಕ್ಷರರು (ನಾ.ಹ.ಜಾ.ನಿ) ರವರ ಬಳಿಗೆ ಕರೆದುಕೊಂಡು ಹೋದಾಗ ಸದರಿಯವರು ಉ.ಪೊ.ಮ (ನಾ.ಹ.ಜಾ.ನಿ) ರವರಿಗೆ ದೂರವಾಣಿ ಮಾಡಿ ನನ್ನ ಅಗಮನದ ವಿಷಯವನ್ನು ತಿಲಿಸುತ್ತಾರೆ. ಸದರಿಯವರು ತಕ್ಷಣ ನನನ್ನು ತಮ್ಮ ಸುಪರ್ದೀಘಿಗೆ ತೆಗೆದುಕೊಂಡು ಕೇಂದ್ರ ಕಛೇರಿಗೆ, ತಾಂತ್ರಿಕ ಮಂಡಳಿ, ಬರುವಂತೆ ಸೂಚಿಸುತ್ತಾರೆ.

ತಕ್ಷಣವೇ ನನ್ನ ಹತ್ತಿರಕ್ಕೆ  ನಾ.ಹ.ಜಾ.ನಿದ ಇಬ್ಬರು ಸಿಬ್ಬಂಧಿಯನ್ನು ನಿಯೋಜಿಸಿ ನನ್ನನ್ನು ಅಲ್ಲಿಂದ ಕಾರಿನ ಹಿಂದಿನ ಸೀಟಿನಲ್ಲಿ ಇಬ್ಬರು ಸಿಬ್ಬಂಧಿಗಳ ನಡುವೆ ನನ್ನನ್ನು ಕೂರಿಸಿಲಾಗಿ ಮುಂದೆ ಶ್ರೀ. ಮಲ್ಲಿಕಾರ್ಜುನರವರು ಚಾಲಕನ ಪಕ್ಕ ಕೂಳಿತುಕೊಂಡು ಸಾಗುತ್ತಾರೆ. ನಮ್ಮ ವಾಹನದ ಮುಂದೆ ಜೀಪ್ನಲ್ಲಿ ಉಪ ಪೊಲೀಸ್ ನಿರೀಕ್ಷರರು ಬರುತ್ತಾರೆ.

ನಂತರ ನಾವು ಸ್ಥಳಕ್ಕೆ ಹೋಗಿಸೇರಿದಾಗ ಉಪ ಪೊಲೀಸ್ ನಿರೀಕ್ಷರರು ರವರು ಉ.ಪೊ.ಮ (ನಾ.ಹ.ಜಾ.ನಿ)ರವರನ್ನು ಭೇಟಿಮಾಡಿ ನನ್ನನ್ನು ಕರೆತಂದಿರುವ ವಿಷಯವನ್ನು ತಿಳಿಸಿದಾಗ ಸದರಿಯವರು ನನ್ನನ್ನು ಸಂಬಂಧ ಪಟ್ಟ ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ ಸೂಚಿಸಿ ಅಲ್ಲಿಂದ ಹೊರಟರು. ತದ ನಂತರ ಪೊಲೀಸ್ ಅಧೀಕ್ಷಕರು ರವರ ಬಳಿಗೆ ಹೋಗಿ ನನ್ನ ವಿಷಯವನ್ನು ವಿವರವಾಗಿ ತಿಳಿಸಿ ನನ್ನನ್ನು ನಾ.ಹ.ಜಾ.ನಿ ದ ಕಛೇರಿಯಲ್ಲೇ ಇರಿಸಿ ನನ್ನ ಕಾವಲಿಗೆ ಇಬ್ಬರು ಸಿಬ್ಬಂಧಿಯನ್ನು ನಿಯೋಜಿಸುತ್ತಾರೆ.

ಇದೆ ಸಮಯಕ್ಕೆ ನನ್ನ ವಕೀಲರಾದ ಶ್ರೀ. ಪ್ರಕಾಶ್ ಶೆಟ್ಟಿ ರವರು ಅಲ್ಲಿಗೆ ಆಗಮಿಸಿ, ಈಗಾಗಲೇ ನಿರೀಕ್ಷಿತ ಜಾಮೀನು ಪಡೆದಿರುವಾಗ ನನ್ನನ್ನು ಬಂಧನದಲ್ಲಿ ಇಡುವುದು ಕಾನೂನಿನ ಉಲ್ಲಂಘನೆಯಾಗಿರುತ್ತದೆ ಹಾಗೂ ಹೆಚ್ಚುವರಿ ತನಿಖೆಯಿಲ್ಲದೆ ಹೆಚ್ಚುವರಿ ಕಾಯ್ದಿಗಳನ್ನು ಸೇರಿಸಿರುವುದು ನನ್ನನ್ನು ಉದ್ದೇಶಪೂರ್ವಕವಾಗಿ ತೊಂದರೆಗೊಳಿಸುವುದಕ್ಕೆ ಮಾತ್ರವೇ ಎಂದು ತೀವ್ರವಾಗಿ ಮಾತನಾಡಿದರು.

ತರುವಾಯ, ಶ್ರೀ. ಮಲ್ಲಿಕಾಜುನರವರು ಸಬಂಧಪಟ್ಟ ನ್ಯಾಯಾಲಯದಲ್ಲಿ ನನ್ನನ್ನು ಹಾಜರುಪಡುಸುವುದಕ್ಕೆ ದಾಖಲರಗಳನ್ನು ತಯಾರಿಸುವಲ್ಲಿ ತೀವ್ರವಾದ ಪ್ರಯತ್ನಗಳನ್ನು ಮಾಡುತ್ತಿದರು. ಇದೆ ಸಮಯದಲ್ಲಿ ನಾ.ಹ.ಜಾ.ನಿ ಸಿಬ್ಬಂಧಿಯವರು ನನ್ನ ಜಾತಿಯ ಸ್ಥಿತಿಯ ಬಗ್ಗೆ ನನ್ನ ಹೇಳಿಕೆಯನ್ನು ಪಡೆದಕೊಂಡು ಸದರಿ ಹೇಳಿಕೆಗೆ ನಾನು ಸಹಾ ಅಂಗೀಕರಿಸಿದ್ದೇನೆ.

ಸುಮಾರು 5 ಗಂಟೆಗೆ ಹೆ.ಪೊ.ಮ (ನಾ.ಹ.ಜಾ.ನಿ) ರವರು ಆಗಮಿಸಿದಾಗ ನಾ.ಹ.ಜಾ.ನಿ ಸಿಬ್ಬಂಧಿಯವರು ಎಲ್ಲಾ ಬೆಳವಣಿಗೆಯನ್ನು ವಿವರಿಸಿದರು. ನಂತರ ನನ್ನ ವಕೀಲರು ಅವರನ್ನು ಭೇಟು ಮಾಡಿ ಎಲ್ಲಾ ವಿಷಯಗಳನ್ನು ಕೂಂಲಂಕುಷವಾಗಿ ವಿವರಿಸಿದಾಗ ಸದರಿಯವರು ನನ್ನನ್ನು ಬಿಡುಗಡೆ ಮಾಡಲು ಸೂಚಿಸಿದರು.

ತಕ್ಷಣವೇ ಶ್ರೀ ಮಲ್ಲಿಕಾಜುನ ರವರು ಮಾನ್ಯ ಸೆಷನ್ಸ್ ಕೋಟ್ (ಸಿ.ಸಿ.ಹೆಚ್–17) ದ ಮುಂದೆ ಹಾಜರಾಗಿ "ಪ್ರಕರಣದಲ್ಲಿ ಆರೋಪಿತ ಶ್ರೀ. ಆರ್ ಬಾಲ ಶರವಣ ಕುಮಾರ ರವರು ಎಚ್.ಎ.ಎಲ್ ಉದ್ಯೋಗಿ ಬೆಂಗಳೂರು ರವರನ್ನು ದಿ:16.08.2014ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ದಸ್ತಗಿರಿ ವಾರೆಂಟ್‌ನ್ನು ಪಡೆದುಕೊಂಡಿರುತ್ತೇವೆ. **ಸದರಿ ಆರೋಪಿತನು ತಲೆ ಮರೆಸಿಕೊಂಡಿರುವುದರಿಂದ** ಆರೋಪಿತನನ್ನು ದಸ್ತಗಿರಿ ಮಾಡಲು 15 ದಿನಗಳ ಕಾಲವಕಾಶ ನೀಡಿ ಮತ್ತೊಂದು ದಿನಾಂಕವನ್ನು ನೀಡಬೇಕಾಗಿ ಅರ್ಜಿಯನ್ನು ಸಲ್ಲಿಸಿ ಸುಳ್ಳು ಮಾಹಿತಿಯನ್ನು ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ".

ಆ ದಿನವೇ ಸುಮಾರು 6ಗಂಟೆಗೆ ನನ್ನನ್ನು ಬಿಡುಗಡೆ ಮಾಡಲಾಯಿತು.

ದಿ:16.08.2014 ರಂದು ಶ್ರೀ. ಮಲ್ಲಿಕಾರ್ಜುನ ಇನ್ಸ್ಪೆಕ್ಟರ್ (ನಾ.ಹ.ಜಾ.ನಿ)ರವರು ಸಲ್ಲಿಸಿದ ಆಧಾರದ ಮೇರೆಗೆ, **ದಿ:25.08.2014** ರಂದು ಸೆಷನ್ಸ್ ಕೋರ್ಟ್ (ಸಿ.ಸಿ.ಹೆಚ್–17) ಜಾಮೀನು ರಹಿತ ವಾರಂಟ್ನು ಜಾರಿ ಮಾಡಿ ಸದರಿ ಆದೇಶವನ್ನು ದಿ:18.09.2014 ಒಳಗೆ ಕಾರ್ಯಗತಗೊಳಿಸಬೇಕೆಂದು ತಿಳಿಸುತ್ತಾರೆ.

**ದಿ:16.09.2014** ರಂದು ನನ್ನ ವಕೀಲರಾದ ಶ್ರೀ. ಬಿ.ಎಂ. ಇರ್ಷದ್ ಅಹ್ಮದ್ ರವರು ಮಾನ್ಯ ಕರ್ನಾಟಕ ಹುಚ್ಚ ನ್ಯಾಯಾಲಯದಲ್ಲಿ ರೀಟ್ ಅರ್ಜಿಯನ್ನು ಸಲ್ಲಿಸಿ, ಅದರಲ್ಲಿ ಜಿ.ಜಾ.ಪ.ಸ ರವರ ಆದೇಶವನ್ನು ಹಾಗೂ ಅಪರಾಧ ಮೊಕದ್ಧಮೆಗಳನ್ನು ರದ್ದುಮಾಡಿ ನನ್ನನ್ನು ಪುನಃ ಸೇವೆಗೆ ಮರು ನೇಮಕಮಾಡಲು ರೀಟ್ ಪೆಟಿಷನ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅದೇ ದಿನ **ದಿ:16.09.2014** ರಂದು ಶ್ರೀ.ಎಸ್.ಬಿ.ಮಲ್ಲಿಕಾರ್ಜುನ ಪೊಲೀಸ್ ಇನ್ಸ್‌ಪೆಕ್ಟರ್ ರವರು ನನ್ನ ಪೂರ್ವನಿರೀಕ್ಷಿತ ಜಾಮೀನು ನಿಯಮಿತವಾದ ಜಾಮೀನಿಗೆ ಕ್ರಮಬದ್ಧಗೊಳಿಸುವ ಸಂಬಂಧ ಅಗತ್ಯ ದಾಖಲಾತಿಗಳೊಂದಿಗೆ ನನ್ನ ಸಹೋದರನೊಂದಿಗೆ ನಾ.ಹ.ಜಾ.ನಿ ಕಛೇರಿಗೆ ಬರುವಂತೆ ನನ್ನ ಮೊಬೈಲ್ ಸಂಖ್ಯೆಗೆ ಕರೆ ಮಾಡಿದರು, (ಇದಕ್ಕೆ ಮುಂಚಿತವಾಗಿ, ಅವರು ನನಗೆ ಹಲವಾರು ಬಾರಿ ಅದೇ ರೀತಿ ಹೇಳಿ ತಮ್ಮನ್ನಯ ಭೇಟಿಯಾಗುವಂತೆ ತಿಳಿಸಿರುತ್ತಾರೆ) ನಾವು ಕಚೇರಿಗೆ ಭೇಟಿ ನೀಡಿದ ನಂತರ, ನನ್ನ ವಿರುದ್ಧದ ಮೊಕದ್ದಮೆಯು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವುದರಿಂದ, ಠಾಣೆಗೆ ತಮ್ಮ ಸಿಬ್ಬಂದಿಯೊಂದಿಗೆ ಕರೆದುಕೊಂಡು ಹೋದರು. ಠಾಣೆಗೆ ತಲುಪಿದ ನಂತರ, ಕೆಳಕಂಡ ದಾಖಲಾತಿಗಳನ್ನು ಸೃಷ್ಟಿಸಿದರು.

1) ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ನನ್ನನ್ನು ಬಂದಿಸಿದ ಹಾಗೆ

2) ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ಬಂಧಿಸಿದ ನಂತರ, ನನ್ನನ್ನು ಹಲಸೂರು ಪೊಲೀಸ್ ಠಾಣೆಗೆ ಒಪ್ಪಿಸಿದ ಹಾಗೆ.

3) ನನ್ನನ್ನು ಹಲಸೂರು ಪೊಲೀಸ್ ಠಾಣೆಯವರಿಂದ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಹಸ್ತಾಂತರಿಸಿದ ಹಾಗೆ

ಮುಂದುವರಿದು....

ತದ ನಂತರ ನನ್ನ ಹಿರಿಯ ಸಹೋದರವರ ಸಹಿಯನ್ನು ನಿಗಧಿತ ಮುದ್ರಿತ ಚೀಟಿಯಲ್ಲಿ ಪಡೆದಿರುತ್ತಾರೆ, ಅದರಲ್ಲಿ ನನ್ನನ್ನು ಬಂಧಿಸಿರುವ ಬಗ್ಗೆ ನನ್ನ ಸಹೋದರನಿಗೆ ಮಾಹಿತಿಯನ್ನು ನೀಡಿದ ಹಾಗೆ ತಿಳಿಸಿರುತ್ತಾರೆ.

ಠಾಣೆಯಿಂದ ನಾ.ಹ.ಜಾ.ನಿ ಕಛೇರಿಗೆ ತೆರಳಿ, ಅಲ್ಲಿಂದ ಮಾನ್ಯ ಸಿ.ಸಿಎಚ್ 16ನೇ ನ್ಯಾಯಾಲಯದ ಎದುರು ಹಾಜರ್ಪಡಿಸಿರುತ್ತಾರೆ. ಅಲ್ಲಿ ಶ್ರೀ.ಎಸ್.ಬಿ.ಮಲ್ಲಿಕಾರ್ಜುನ, ಪೋಲೀಸ್ ಇನ್ಸ್‌ಪೆಕ್ಟರ್ ರವರು ಜ್ಞಾಪನ ಮನವಿಯಲ್ಲಿ ದಿ: 16.09.2014 ರಂದು ಸುಮಾರು 03:15 ಗಂಟೆಗೆ ನನ್ನನ್ನು ಬಂಧಿಸಿ, ನನ್ನ ಹಾಗೂ ನನ್ನ ಸಹೋದರರ ಶಾಲಾ ದಾಖಲಾತಿಗಳು ಮತ್ತು ಹೇಳಿಕೆ ಪಡೆಯ ಬೇಕು ಎಂದು ತಿಳಿಸಿ ಸುಳ್ಳು ಹೇಳಿ 14 ದಿನಗಳು ವಶಕ್ಕೆ ನೀಡುವಂತೆ ಕೋರಿರುತ್ತರೆ.

ನನ್ನ ವಕೀಲರಾದ ಶ್ರೀ.ಪ್ರಕಾಶ್ ಶೆಟ್ಟಿ ಯವರು ತಕ್ಷಣಕ್ಕೆ ಬಂದು “ನನ್ನ ವಿರುದ್ಧ ನನಗೆ ತೊಂದರೆ ನೀಡುವುದಕ್ಕಾಗಿ, ನಾ.ಹ.ಜಾ.ನಿ ರವರು ನನ್ನ ಬಂಧನದ ಉದ್ದೇಶಕ್ಕಾಗಿ ಹೆಚ್ಚು ಕಾಯ್ದೆಗಳನ್ನು ಎಫ್.ಐ.ಆರ್ ನಲ್ಲಿ ಸೇರಿಸಿರುವುದಾಗಿ, ಈಗಾಗಲೇ ಎಲ್ಲಾ ತನಿಖೆಯು ಕೈಗೊಳ್ಳಲಾಗಿರುವುದರಿಂದ ಕಾನೂನಿನ ವಶಕ್ಕೆ ಪಡೆಯುವ ಅಗತ್ಯವಿರುವುದಿಲ್ಲ” ವಾದ ಮಂಡಿಸಿದ ನಂತರ ಮಾನ್ಯ ನ್ಯಾಯಾಲಯವು ಒಂದು ದಿನದ ಮಧ್ಯಂತರ ಜಾಮೀನು ನೀಡಿ ಸದರಿ ಪ್ರಕರಣವನ್ನು ಸಿ.ಸಿ.ಎಚ್ 17 ಎಸ್ಸಿ/ಎಸ್ಟಿ ನ್ಯಾಯಾಲಯವು ರಜೆಯಿದ್ದ ಪ್ರಯುಕ್ತ ಪ್ರಕರಣದ ಮುಂದಿನ ವಿಚಾರಣೆಯನ್ನು ಮರು ದಿನಕ್ಕೆ ಮುಂದೂಡಲಾಯಿತು.

ದಿ: **17.09.2014** ರಂದು ಮಾನ್ಯ ಸಿ.ಸಿ.ಎಚ್ 17 (ಎಸ್ಸಿ/ಎಸ್ಟಿ) ನ್ಯಾಯಾಲಯದಲ್ಲಿ ಹಾಜರಾಗಿ ದಿ: 20.09.2014 ರವರಗೆ ಮಧ್ಯಂತರ ಜಾಮೀನು ನೀಡಲಾಯಿತು. ನಂತರ ನನ್ನ ವಿಚಾರಣೆಯ ಸಮಯದಲ್ಲಿ ನಾನು ಸದರಿ ಮಾನ್ಯ ನ್ಯಾಯಾಲಯಕ್ಕೆ ಹಲವಾರು ಬಾರಿ ಹಾಜರಾಗಿ ಮತ್ತು ಪ್ರತಿ ಬಾರಿ ನನ್ನ ಮಧ್ಯಂತರ ಜಾಮೀನು ಅವಧಿಯನ್ನು ವಿಸ್ತರಿಸಲಾಯಿತು.

**ದಿ:20.09.2014** ರಂದು ಎಚ್.ಎ.ಎಲ್ ಸಂಸ್ಥೆಯವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನನ್ನ ರೀಟ್ ಪೆಟಿಷನ್‌ಗೆ ಆಕ್ಷೇಪಣೆಯನ್ನು ಪ್ರಮಾಣ ಪತ್ರದ ಮೂಲಕ ಮಹಾ ವ್ಯವಸ್ಥಾಪಕರು ದುರಸ್ಥಿ ವಿಭಾಗ ರವರು ದಾಖಲಿಸುತ್ತರೆ. ಅದರನ್ವಯ ಸತ್ಯಾಂಶವನ್ನು ಮುಚ್ಚಿ ಸುಳ್ಳು ಮಾಹಿತಿಯನ್ನು ನೀಡಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಾರಿ ತಪ್ಪಿಸುವ ಪ್ರಯತ್ನವನ್ನು ಮಾಡಿರುತ್ತರೆ. ಆಕ್ಷೇಪಣೆಯಲ್ಲಿ **"ನನ್ನ ನೇಮಕಾತಿಯ ನಂತರ ಎಚ್.ಎ.ಎಲ್ ರವರು ಜಿಲ್ಲಾ ಡಂಡಾಧಿಕಾರಿಗಳು/ ಜಿಲ್ಲಾಧಿಕಾರಿಗಳು, ಬೆಂ (ದ) ರವರಿಗೆ ದಿ: 05.05.1997 ರಂದು ನನ್ನ ಜಾತಿ ವಿಚಾರಣೆ ಮಾಡಲು ಮನವಿಯನ್ನು ಕೊರಿ ಸದರಿ ವಿಷಯಕ್ಕೆ ಎಚ್.ಎ.ಎಲ್ ಸಂಸ್ಥೆಯವರು ಹಲವಾರು ದಿಂನಾಕಗಳಲ್ಲಿ ಹಲವಾರು ಜ್ಞಾಪನಗಳನ್ನು ಕಳುಹಿಸಿ, ಆದಾದ ನಂತರ ಎಚ್.ಎ.ಎಲ್ ಸಂಸ್ಥೆಯವರು ದಿ: 25.06.2014 ಜಿಲ್ಲಾ ಜಾತಿ ಪರಿಶೀಲನ ಸಮಿತಿ ರವರು ನನ್ನ ಜಾತಿ ಪರಿಶೀಲನ ವರದಿಯನ್ನು ಹಾಗೂ ದಿ: 01.07.2014 ಎ.ಡಿ.ಜಿ.ಪಿ, ನಾ.ಹ.ಜಾ.ನಿ ರವರು ನಾನು ಕ್ರೈಸ್ತ ಮತಕ್ಕೆ ಸೇರಿದವನು ಎಂದು ನೀಡಲಾದ ಪತ್ರ ಸ್ವೀಕರಿಸಿದ ನಂತರ ನನ್ನನು ಚಾಲ್ತಿಯಲಿರುವ ನಿಯಮಾನುಸಾ ಎಚ್.ಎ.ಎಲ್ ಸೇವೆಯಿಂದ ವಜಾಮಾಡಲಾಯಿತ್ತು"** ಎಂದು ತಿಳಿಸಿರುತ್ತರೆ.

ಆಘಾತಕಾರಿ ವಿಷಯವೆನೆಂದರೆ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುವ ಆಕ್ಷೇಪಣೆಯಲ್ಲಿ "ಎಚ್.ಎ.ಎಲ್ ರವರು ದಿ:05.05.1997 ರಂದು ನನ್ನ ಜಾತಿ ವಿಚಾರಣೆ ಮನವಿ ಮಾಡಿರುತ್ತರೆ ಅದರೆ ನನ್ನ ಜಾತಿ ವಿಚಾರಣೆ ವರದಿಯು ಎಚ್.ಎ.ಎಲ್ ರವರು ದಿ:01.07.2014 ರಂದು ಅಂದರೆ ಸುಮಾರು 17 ವರ್ಷಗಳ ನಂತರ ಸ್ವೀಕರಿಸುತ್ತರೆ.

ಮಹಾ ವ್ಯವಸ್ಥಾಪಕರು ದುರಸ್ಥಿ ವಿಭಾಗ ರವರು ಮುಚ್ಚಿರುವ ಸತ್ಯಾಂಶವೆನೆಂದರೆ, ಈಗಾಗಲೇ ಎಚ್.ಎ.ಎಲ್ ನ ಮನವಿ ಮೆರೆಗೆ 1998ರಲೇ ನನ್ನ ಜಾತಿ ವಿಚಾರಣೆ ನಡೆಯಲಾಗಿ, ಜಿಲ್ಲಾ ಜಾತಿ ಪರಿಶೀಲನ ಸಮಿತಿ ರವರು ನನ್ನ ಜಾತಿ ಕೂಲಂಕುಶ ವಿಚಾರಣೆಯನ್ನು ನಡೆಸಿ ನನ್ನ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ದಿ:24.03.1998 ರಲೇ ನೀಡಲಾಯಿತು. ಸದರಿ ಪತ್ರ ಸ್ವೀಕರಿಸಿದ ನಂತರವೆ ದಿ: 11.07.1998 ರಲ್ಲಿ ಎಚ್.ಎ.ಎಲ್ ನವರು ನನಗೆ ನೇಮಕಾತಿ ಆದೇಶವನ್ನು ನೀಡಿರುತ್ತರೆ ಮತ್ತು ನನ್ನ ಸೇವ ಅವಧಿಯಲ್ಲಿ ನಾಲ್ಕು ಬಾರಿ ನನಗೆ ಬಡ್ತಿಯನ್ನು ನಿಡಿರುತ್ತರೆ. ನನ್ನ ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿ ಇನ್ನೂ ಎಚ್.ಎ.ಎಲ್ ನ ಆಧಿನದಲ್ಲೇ ಇದೆ.

(ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯವೆನೆಂದರೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮಹಾ ವ್ಯವಸ್ಥಾಪಕರು ರವರು ದಾಖಲಿಸಿದ ಮೇಲಿರುವ ಸುಳ್ಳು ಮಾಹಿತಿಯು ನಿಯಾಮ 191 ಮತ್ತು 192 ರ ಅಡಿಯಲ್ಲಿ ಕ್ರಿಮಿನಲ್ ಅಪರಾದವಾಗಿದು ನಿಯಾಮ 193 ಇಂಡಿಯನ್ ಪೀನಲ್ ಕೋಡ (ಐ.ಪಿ.ಸಿ) ಅಡಿಯಲ್ಲಿ ಶಿಕ್ಷಾರ್ಹ ಅಪರಾದ).

ದಿ: **09.10.2014** ರಂದು **ಮತ್ತೋಬ್ಬ ಹೊರಗಿನ ವ್ಯಕ್ತಿಯು ಯಾವುದೊ ಎಸ್ಸಿ/ಎಸ್ಟಿ ಸಮಿತಿಯ ಸದಸ್ಯ ಹಾಗೂ ವಕೀಲರು ಎಂದ ತಿಳಿಸುತ್ತಾ** ತಹಸಿಲ್ದಾರ್, ಬಂಗಾರಪೇಟೆ (ತಾ) ರವರಿಗೆ ಲಿಖಿತ ಮನವಿಯನ್ನು ಸಲ್ಲಿಸಿ ಅದರ ಜೊತೆಗೆ 33 ಪ್ರತಿಗಳನ್ನು (ನನ್ನ ತಂದೆಗೆ ಸಂಬಂಧಿಸಿದ ಕೆಲವು ಗೌಪ್ಯ ಸೇವ ದಾಖಲಾತಿಗಳನ್ನು ಮತ್ತು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಆದೇಶ ದಿ: 25.06.2014 ಮತ್ತು ನನ್ನನ್ನು ಎಚ್. ಎ.ಎಲ್ ಸೇವೆಯಿಂದ ವಜಾ ಮಾಡಿದ ಆದೇಶದ ಪ್ರತಿ ದಿ:01.07.2014) ಲಗತ್ತಿಸಿ, ನನ್ನ ತಂದೆಯ ವಿರುದ್ದ ಕ್ರಮ ಕೈಗೊಳ್ಳುವಂತೆ ಸಲ್ಲಿಸಿರುತ್ತಾರೆ.

**ದೂರು ನೀಡಿದ ದಿನದವರೆಗೂ ಮೇಲೆ ತಿಳಿಸಿರುವ ಎಲ್ಲಾ ಗೌಪ್ಯ ದಾಖಲಾತಿಗಳು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಅಥವ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸುಪರ್ದಿಫೆಯಲ್ಲಿ ಇರಬೇಕಾದ ದಾಖಲೆಗಳು.**

ಸದರಿ ಮನವಿಯ ಆದಾರದ ಮೇರೆಗೆ ತಹಸಿಲ್ದಾರ್, ಬಂಗಾರಪೇಟೆ (ತಾ) ರವರು ನಂತರದ ದಿನಗಳಲ್ಲಿ ನನ್ನ ತಂದೆಯ ಜಾತಿಯ ಪರಿಶೀಲನೆಯನ್ನು ನಡೆಸುತ್ತಾರೆ.

ನಂತರ ದಿನಗಳಲ್ಲಿ ನಾ.ಹ.ಜಾ.ನಿರವರು ಮತ್ತು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರವರಿಗೆ ಯಾರಾದರೂ ನನ್ನ ಜಾತಿ ಪರಿಶೀಲನೆ ವರದಿ ಹಾಗೂ ಅದಕೆ ಸಂಭಂದ ಪಟ್ಟ ದಾಖಳಾತಿಗಳನ್ನು ಮಾ.ಹ.ಅ ಅಡಿಯಲ್ಲಿ ಕೋರಿದ್ದಾರೆಯೇ ಎಂದು ಕೋರಲಾಗಿ, ಎರಡೂ ಪ್ರಾಧಿಕಾರಗಳಿಂದ "ಇಲ್ಲ" ಎಂಬ ಉತ್ತರ ಪಡೆದಿರುತ್ತೇನೆ.

ಹೀಗಿರುವಾಗ, ನಾ.ಹ.ಜಾ.ನಿ ಅಥವ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರವರ ಭದ್ರತೆಯ ಅಧೀನದಲ್ಲಿ ಇರಬೇಕಾದ ಎಲ್ಲಾ ಗೌಪ್ಯ ದಾಖಲಾತಿಗಳು ಅಪರಿಚಿತ ವ್ಯಕ್ತಿಯ ಕೈಗೆ ಹೇಗೆ ತಲುಪಿದವು?

ವಿವರವಾದ ತನಿಖೆಯಿಂದಲೇ ನನ್ನನ್ನು ಹಾಗೂ ನನ್ನ ಕುಟುಂಬದವರಿಗೆ ತೊಂದರೆಗೆ ಗುರುಪಡಿಸುವ ಸಲುವಾಗಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಅಥವಾ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರವರು ಉದ್ದೇಶಪೂರ್ವಕವಾಗಿ **ಈ ಎಲ್ಲಾ ದಾಖಲಗಳನ್ನು ಅಪರಿಚಿತ ವ್ಯಕ್ತಿಯ ಕೈಗೆ ಒದಗಿಸಿರಬೇಕು** ಅಥವಾ ಸದರಿ **ಅಪರಿಚಿತ ವ್ಯಕ್ತಿಯೇ ಪ್ರಾಧಿಕಾರದಿಂದ ದಾಖಲೆಗಳನ್ನು ಕದ್ದಿದಾರ ಎಂಬುದು ತಿಳಿಯುತ್ತಾದೆ.**

ಸುಮಾರು ವಾದ–ವಿವಾದಗಳ ನಂತರ ದಿ: **21.10.2014** ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯ ಆದೇಶವನ್ನು ತಟಸ್ಥಗೊಳಿಸಿ ಮುಂದುವರೆದಂತೆ, ನನ್ನನು ಸೇವೆಯಿಂದ ವಜಾಗೊಳಿಸಿದ ಆದೇಶವನ್ನು ತಟಸ್ಥ ಮಾಡಿಲ್ಲ ಎಂದು ಆದೇಶವನ್ನು ಹೊರಡಿಸಲಾಯಿತು.

**ದಿ: 07.11.2014** ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ನನ್ನ ಪ್ರಕರಣದ ವಿಚಾರಣೆಯು ನಡೆಯುತ್ತಿರುವಾಗ ವಿಶೇಷ ಸರ್ಕಾರಿ ವಕೀಲರು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರವರ ದಿ:25.06.2014 ಆದೇಶವನ್ನು ಹಿಂಪಡೆಯುತದತೆವೆ ಎಂದು ಮನವಿ ಮಾಡಿ ಎರಡು ವಾರಗಳ ಕಾಲವಕಾವನ್ನು ನೀಡುವಂತೆ ಕೋರಲು ಮಾನ್ಯ ನ್ಯಾಯಾಲಯವು 14 ದಿನಗಳ ಗಡುವನ್ನು ನೀಡಿತು. ಆಕಸ್ಮಿಕ ಎಂಬುವಂತೆ ಈ ವಿಚಾರಣೆಯ ನಂತರ ನನ್ನ ಪ್ರಕರಣದ ವಿಚಾರಣೆಯನ್ನು ಮತ್ತೊಂದು ಕರ್ನಾಟಕ ಉಚ್ಛ ನ್ಯಾಯಾಲಯದ ಪೀಠಕ್ಕೆ ವರ್ಗಾಯಿಸಿತು.

ದಿ: 10.11.2014 ರಲ್ಲಿ ಎ.ಡಿ.ಜಿ.ಪಿ, ನಾ.ಹ.ಜಾ.ನಿ ರವರು ನನ್ನ ಜಾತಿ ಪರಿಶೀಲನಾ ತನಿಖಾ ವರದಿಯ ಎಲ್ಲಾ ದಾಖಲೆಗನ್ನು ಲಗತಿಸಿ ಲಿಖಿತ ಪತ್ರದ ಮೂಲಕ ಪೋಲಿಸ್ ಅದೀಕ್ಷಕರು ನಾ.ಹ.ಜಾ.ನಿ ತುಮಕೂರು ರವರಿಗೆ **ಮತ್ತೊಮ್ಮೆ ನನ್ನ ಜಾತಿಯ ಪುನರ್ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಲು ಕೊರಿರುತ್ತರೆ.**

**ದಿ: 10.11.2014** ರಂದು ಪೊಲೀಸ್ ಇನ್ಸ್‌ಪೆಕ್ಟರ್ ನಾ.ಹ.ಜಾ.ನಿರವರು ನನ್ನ ಕಿರಿಯ ಸಹೋದರನಿಗೆ ಸೂಚನಾ ಪತ್ರ ಕಳುಹಿಸಿ ಸದರಿ ಪತ್ರದಲ್ಲಿ ನನ್ನ ಕಿರಿಯ ಸಹೋದರನ ಮೇಲೆ  ಜಾತಿಯ ಸಿಧುಂತ್ವ ಕುರಿತು ನಾ.ಹ.ಜಾ.ನಿರವರು ದೂರು ಸ್ವೀಕರಿಸಿದು ಆ ಸಂಭಂಧ ವಿಚಾರಣೆ ಮಾಡಲು ಕೆಲವೊಂದು ದಾಖಲಾತಿಗಳೊಂದಿಗೆ ನಾ.ಹ.ಜಾ.ನಿರವರ ಕೆ.ಜಿ ರಸ್ತೆ ಕಛೇರಿ ದಿ:13.11.2014 ರಂದು ಭೇಟಿಯಾಗುವಂತೆ ಸೂಚಿಸಿದರು. ಇದೇ ರೀತಿ ದಿ: 04.12.2014 ರಂದು ಮತ್ತೊಂದು ಸೂಚನಾ ಪತ್ರವನ್ನು ಜಾರಿ ಮಾಡಿದರು.

ಸುಮಾರು ವಿಚಾರಣೆಗಳ ಬಳಿಕ ಮಾನ್ಯ ಸಿ.ಸಿ.ಹೆಚ್–17 (ಎಸ್ಸಿ/ಎಸ್ಟಿ) ನ್ಯಾಯಾಲಯವು ನನ್ನ ನಿಯಾಮಿತ ಜಾಮೀನ್ನನು **ದಿ:11.12.2014** ರಂದು ಮಂಜೂರು ಮಾಡಿ, ಪ್ರಕರಣದ ವಿಚಾರಣೆಯನ್ನು ದಿ: 23.01.2015 ಕ್ಕೆ ಮುಂದೂಡಿತು.

**ದಿ:12.12.2014** ರಂದು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಪ್ರಾಧಿಕಾರದವರು ನನ್ನ ಕಿರಿಯ ಸಹೋದರರಿಗೆ ಜಾರಿ ಮಾಡಿದ ಸೂಚನೆಗಳ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ನನ್ನ ವಕೀಲರಾದ ಶ್ರೀ.ಬಿ.ಎಂ.ಇರ್ಷಾದ್ ಅಹ್ಮದ ರವರು ಪೊಲೀಸ್ ಮಹಾನಿರ್ದೇಶಕರು, ನಾ.ಹ.ಜಾ.ನಿರವರಗೆ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರಿಗೆ ಸೂಚನೆ ಕಳುಹಿಸಿದರು.

ಸುಮಾರು ವಿಚಾರಣೆಗಳ ನಂತರ **ದಿ:06.01.2015** ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನಾನು ಪರಿಶಿಷ್ಟ ಜಾತಿ "ಆದಿದ್ರಾವಿಡ" ಗೆ ಸೇರಿದವನೆಂದು ಎತ್ತಿ ಹಿಡಿದು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರ ಆದೇಶ ಹಾಗೂ ನನ್ನ ವಿರುದ್ಧ ಜಾರಿ ಮಾಡಲಾದ ಅಪರಾಧ ಮೊಕ್ಕದಮೆಗಳನ್ನು ರದ್ದುಪಡಿಸಿ, ಆದೇಶ ಸ್ವೀಕರಿಸಿದ ಒಂದು ವಾರದೊಳಗೆ ಎಲ್ಲಾ ಸವಲತ್ತುಗಳೊಂದಿಗೆ ಎಚ್.ಎ.ಎಲ್ ಸಂಸ್ಥೆಯಲ್ಲಿ ಸೇವೆಗೆ ಪುನ: ಮರು ನೇಮಕ ಮಾಡಿಕೊಳ್ಳುವಂತೆ ತೀರ್ಪು ಹೊರಡಿಸಿತು.

ಮಾನ್ಯ ನ್ಯಾಯಾಲಯದ ತೀರ್ಪಿನ ಆದೇಶ ಸ್ವೀಕೃತಿಯ ನಂತರ, ಮುಖ್ಯ ವ್ಯವಸ್ಥಾಪಕರು (ಮಾನವ ಸಂಪನ್ಮೂಲ), ದುರಸ್ಥಿ ವಿಭಾಗ, ಎಚ್.ಎ.ಎಲ್ ರವರು ದಿ:22.01.2015 ರಂದು ನನ್ನನ್ನು ಸಂಸ್ಥೆಯಲ್ಲಿ ಮರು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳುತಾ ನನಗೆ ಎಲ್ಲಾ ಸವಲತ್ತುಗಳನ್ನು ಶೀಘ್ರವಾಗಿ ಒದಗಿಸಬೇಕೇಂದು ಲಿಖಿತ ಮನವಿ ನಾನು ಸಲ್ಲಿಸಿದೆ.

**ದಿ: 27.01.2015** ರಂದು ಸಂಜೆ 04:00 ಗಂಟೆಗೆ ಎಚ್.ಎ.ಎಲ್ ಆಡಳಿತ ಮಂಡಳಿತಯು ಸಂಸ್ಥೆಯಲ್ಲಿ ನನ್ನನು ಸೇವೆಗೆ ಮರು ನೆಮಕ ಮಾಡಿರುವ ಕುರಿತು ನನಗೆ ಸೂಚನಾ ಪತ್ರವನ್ನು ಜಾರಿಗೊಳಿಸಿದರು.

**ದಿ: 28.01.2015** ರಂದು ನಾನು ಎ.ಎಚ್.ಎಲ್ ಸೇವೆಗೆ ಮರಳಿ ವರದಿಯಾಗಿ ಆ ದಿನವೆ ಮುಖ್ಯ ವ್ಯವಸ್ಥಾಪಕರು (ಮಾ.ಸಂ) ದುರಸ್ಥಿ ವಿಭಾಗಕ್ಕೆ ನನ್ನನ್ನು ಎ.ಎಚ್.ಎಲ್ ಸೇವೆಯಿಂದ ವಜಾ ಮಾಡಿದ ದಿನಾಂಕದಿಂದ ಮರು ನೇಮಕ ಮಾಡಿದ ದಿನಾಂಕದವರೆಗೂ ಬಾಕಿಯಿರುವ ವೇತನವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಮರು ಪಾವತಿಸುವಂತೆ ನಾನು ಲಿಖಿತ ಮನವಿ ಸಲ್ಲಿಸಿದೆ.

**ದಿ:02.02.2015** ರಂದು ಎಚ್.ಎ.ಎಲ್ ಆಡಳಿತ ಮಂಡಳಿಯವರು ಸದರಿ ಅವಧಿಯಲ್ಲಿ ನಾನು ಸಂಸ್ಥೆಯಲ್ಲಿ ಸೇವೆ ಸಲ್ಲಿಸ ಕಾರಣ ನನಗೆ ಬರಬೇಕಾದ ಬಾಕಿ ವೇತನವನ್ನು ಪಾವತಿಸಲು ನಿಯಮಾನುಸಾರ ಅವಕಾಶ ಇರುವುದಿಲ್ಲ ಎಂದು ನನಗೆ ಹಿಂಬರಹ ನೀಡಿದರು.

**ದಿ:04.02.2015** ರಂದು ಪೊಲೀಸ್ ಉಪಾಧೀಕ್ಷಕರು, ನಾ.ಹ.ಜಾ.ನಿ ತುಮಕೂರು ರವರು ಹೆಚ್ಚುವರಿಯಾಗಿ ಸಂಗ್ರಹಿಸಿದ ಎಲ್ಲಾ ದಾಖಲಾತಿಗಳೊಂದಿಗೆ ನನ್ನ ಜಾತಿ ಮರು ಪರಿಶೀಲನಾ ವರದಿಯನ್ನು ಎ.ಡಿ.ಜಿ.ಪಿ, ನಾ.ಹ.ಜಾ.ನಿರವರಿಗೆ ಸಲ್ಲಿಸಿದರು.

ಪೊಲೀಸ್ ಉಪಾಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ಸಲ್ಲಿಸಿರುವ ಜಾತಿ ಪರಿಶೀಲನಾ ವರದಿಯಲ್ಲಿ **"ನನ್ನ ತಂದೆಯರು ಮತ್ತು ಅವರ ಎಲ್ಲಾ ಮಕ್ಕಳು ಪರಿಶೀಷ್ಟ ಜಾತಿ "ಆದಿ ದ್ರಾವಿಡ" ಜನಾಂಗಕ್ಕೆ ಸೇರಿದವರಾಗಿರುತ್ತಾರೆ"** ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

**ದಿ: 11.03.2015** ರಂದು ನನ್ನ ತಂದೆಯ ವಿರುದ್ದ ಕೈಗೊಳ್ಳಲಾದ ಅನ್ಯತಿಕ ನಡವಳಿಯನ್ನು ಕೈ ಬಿಡುವಂತೆ ಮಾನ್ಯ ನಾಯಾಲಯವು ನೀಡಲಾದ ಆದೇಶದ ಪ್ರತಿ ಲಗತ್ತಸಿ (1) ವಿಶೇಷ ತಹಸಿಲ್ದಾರ್, ಕೆ.ಜಿ.ಎಫ್ (2) ತೆಹಸಿಲ್ದಾರ್, ಬಂಗಾರಪೇಟೆ (3) ಉಪ ಆಯುಕ್ತರು ಮತ್ತು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ (4) ಕಾರ್ಯದರ್ಶಿ,ಸಮಾಜ ಕಲ್ಯಾಣ ಮಂಡಳಿ ರವರಿಗೆ ನಾನು ಮನವಿ ಸಲ್ಲಿಸಿದೆ.

**ದಿ: 10.04.2015** ರಂದು ಮಾನ್ಯ ನ್ಯಾಯಾಲಯದ ಆದೇಶದ ರೀತ್ಯಾ ನನ್ನ ಬಾಕಿ ವೇತನದ ಮರು ಪಾವತಿ ಮಾಡದೇ ಇರುವ ಬಗ್ಗೆ ಮುಖ್ಯ ವ್ಯವಸ್ಥಾಪಕರು (ಮಾನವ ಸಂಪನ್ಮೂಲ) ದುರಸ್ಥಿ ವಿಭಾಗ ರವರ ವಿರುದ್ಧ ಅಪರಾಧ ನಡುವಳಿ ಕೋರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದೆ.

**ದಿ:28.04.2015** ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಪಾಟಿದಾರರಾದ ಎಲ್ಲಾ ವಿಚಾರಣೆಗಳ ಬಳಿಕ, "ಅರ್ಜಿದಾರರಿಗೆ ಬರಬೇಕಾದ ಬಾಕಿ ವೇತನವನ್ನು ಪಾವತಿಸಲು ಈಗಾಗಲೇ ಜಾರಿಗೊಳಿಸಿದು ಉದ್ಯೋಗದಾತರು ಸಂಸ್ಥೆಯಲ್ಲಿ ಸೇವೆ ಸಲ್ಲಿಸಲಿಲ್ಲ ಎಂಬ ಕಾರಣಕ್ಕಾಗಿ ಹಿಂಬಾಕಿ ವೇತನವನ್ನು ತಡೆಹಿಡಿಯಲು ಸೂಕ್ತ ಕಾರಣವಿಲ್ಲ ಹಾಗೂ ಅರ್ಜಿದಾರರ ಯಾವುದೇ ತಪ್ಪಿಲ್ಲದಿದ್ದರೂ ಅವರ ಜಾತಿ ಪ್ರಮಾಣ ಪತ್ರ ರದ್ದು ಮಾಡಲಾಯಿತು ಮತ್ತು ಅವರ ಜಾತಿ ಪ್ರಮಾಣ ಪತ್ರ ರದ್ದಾಗಿರುವ ಕಾರಣಕ್ಕಾಗಿ ಸಂಸ್ಥೆಯಿಂದ ವಜಾಗೊಳಿಸಲಾಯಿತು" ಎಂದು ಮಧ್ಯಂತರ ಆದೇಶ ನೀಡಿದರು.

ಮುದುವರಿದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು "ಉದ್ಯೋಗದಾತರು ಒಂದು ಸರಕಾರದ ಸಂಸ್ಥೆಯಾಗಿದು ಆ ಸಂಸ್ಥೆಯು ಮಾದರಿಯಾಗಿ ಕಾರ್ಯ ನಿರ್ವಹಿಸಬೇಕೆಂದು" ಉಲ್ಲೇಖಿಸಿರುತ್ತದೆ.

ಮುಂದುವರೆಸಿ, ದಿ:01.07.2014 ರಿಂದ ದಿ: 28.01.2015 ಅವದಿಯ ವರಗೆ ಎಲ್ಲಾ ಹಿಂಬಾಕಿ ವೇತನ ಮತ್ತು ಭತ್ಯೆಯನ್ನು ಒಂದು ವಾರದ ಅವದಿಯಲ್ಲಿ ಎಚ್.ಎ.ಎಲ್ ಆಡಳಿತ ಮಂಡಳಿಯವರು ಅರ್ಜಿದಾರರಿಗೆ ಪಾವತಿಸಿ, ಮಾನ್ಯ ನ್ಯಾಯಲಯದ ವಾರ್ಷಿಕ ರಜೆಯ ನಂತರ, 02 ವಾರಗಳ ಅವಧಿಯಲ್ಲಿ ಈ ಸಂಬಂದ ಎಚ್.ಎ.ಎಲ್ ಸಂಸ್ಥೆಯವರು ಪಲನಾ ವರದಿಯನ್ನು ನ್ಯಾಯಲಯಕ್ಕೆ ಸಲ್ಲಿಸುವಂತೆ ಆದೇಶಿಸಲಾಯಿತು.

ಎಚ್.ಎ.ಎಲ್ ಆಡಳಿತ ಮಂಡಳಿಯವರು ದಿ:01.07.2014 ರಿಂದ ದಿ: 28.01.2015 ಅವದಿಯ ನನ್ನ ಬಾಕಿ ವೇತನವನ್ನು **ದಿ:05.06.2015** ರಂದು ನನ್ನ ಬ್ಯಾಂಕಿನ ಖಾತೆಗೆ ವರ್ಗಾಯಿಸಿ, ಮಾನ್ಯ ನ್ಯಾಯಾಲಯದ ಆದೇಶದಂತೆ, ನನಗೆ ಬರಬೇಕಾದ ಎಲ್ಲಾ ಭತ್ಯಗಳನ್ನು ನೀಡಲಾಗಿದ್ದು, ಅದನ್ನು ನಾನು ಪಡೆದಿರುವ ಬಗ್ಗೆ ಪತ್ರವನ್ನು ಪಡೆದು ದಿ:22.06.2015 ರಂದು ಮಾನ್ಯ ನಾಯಾಲಯಕ್ಕೆ ಎಚ್.ಎ.ಎಲ್ ಸಲ್ಲಿದ ನಂತರ ಎಚ್.ಎ.ಎಲ್ ವಿರುದ್ದ ನಾನು ಸಲ್ಲಿಸಿದ್ದ ಆರೋಪ ಅರ್ಜಿಯನ್ನು ಮಾನ್ಯ ನಾಯಾಲಯವು ಕೈ ಬಿಟ್ಟಿತ್ತು.

**ದಿ:10.08.2015** ರಂದು ಎಚ್.ಎ.ಎಲ್ ಸಂಸ್ಥೆಯು ಇನ್ನೊಬ್ಬರು ಮಹಾ ವ್ಯವಸ್ಥಾಪಕರು ದುರಸ್ಥಿ ವಿಭಾಗ ರವರು ಪ್ರಮಾಣ ಪತ್ರದ ಮೂಲಕ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು IA(ಸಂವಾದಾತ್ಮಕ ಅರ್ಜಿ) ಸಲ್ಲಿಸಿ **ದಿ.06.01.2015 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಸ್ಪಷ್ಠೀಕರಣ ಅಂದರೆ ನಾನು ಹಿಂಬಾಕಿ ವೇತನ ಪಡೆಯಲು ಅಹರ್ತೆನಲ್ಲ ಎಂದು ಕೋರಿ IA ನ್ನು ದಾಖಲಿಸುತ್ತರೆ.**

ಅದರನ್ವಯ ಸತ್ಯಾಂಶವನ್ನು ಮುಚ್ಚಿ ಸುಳ್ಳು ಮಾಹಿತಿಯನ್ನು ನೀಡಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಾರಿ ತಪ್ಪಿಸುವ ಪ್ರಯತ್ನವನ್ನು ಮಹಾ ವ್ಯವಸ್ಥಾಪಕರು ದುರಸ್ಥಿ ವಿಭಾಗ ರವರು ಮಾಡಿರುತ್ತರೆ. IA ನಲ್ಲಿ **"ನನು ಎಚ್.ಎ.ಎಲ್ ಗೆ ದಿ:10.03.1997 ರಲ್ಲಿ ಇನ್ಸ್‌ಪೆಕ್ಟರ್ ಆಗಿ ಗುತ್ತಗೆ ಆಧಾರದಲ್ಲಿ ಸೇರಲಾಗಿ ತದ ನಂತರ ಗುತ್ತಿಗೆ ಅವಧಿ ಮುಗಿದ ನಂತರ ನನಗೆ ಇನ್ಸ್‌ಪೆಕ್ಟರ್ ಆಗಿ ಕ್ವೀಲಿಟಿ ಕಂಟರೊಲ್ ನಲ್ಲಿ ಕಾಯಂ ನೇಮಕಾತಿಯನ್ನು ದಿ:10.03.1998 ರಲ್ಲಿ ಮಾಡಲಾಯಿತು ನಂತರ ಎಚ್.ಎ.ಎಲ್ ರವರು ಜಿಲ್ಲಾ ಜಾತಿ ಪರಿಶೀಲನ ಸಮಿತಿ ರವರಿಂದ ದಿ:25.06.2014ರಲ್ಲಿ ಜಾತಿ ಪರಿಶೀಲನ ವರದಿ ಸ್ವೀಕರಿಸಿದ ನಂತರ ಎಚ್.ಎ.ಎಲ್‌ರವರು ದಿ:01.07.2014ರಂದು ನನ್ನನು ಸೇವೆಯಿಂದ ವಜಾಮಾಡಲಾಯಿತ್ತು"**

ಆಘಾತಕಾರಿ ವಿಷಯವೆನೆಂದರೆ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುವ ಆಕ್ಷೇಪಣೆಯಲ್ಲಿ "ಎಚ್.ಎ.ಎಲ್ ರವರು ನನ್ನ ಜಾತಿ ವಿಚಾರಣೆ ವರದಿಯನ್ನು ಜಿ.ಜಾ.ಪ.ಮಯಿಂದ ಎಚ್.ಎ.ಎಲ್ ರವರು ದಿ:25.06.2014ರಂದು ಅಂದರೆ ಸುಮಾರು 17 ವರ್ಷಗಳ ನಂತರ ಸ್ವೀಕರಿಸುತ್ತರೆ.

ಮಹಾ ವ್ಯವಸ್ಥಾಪಕರು ದುರಸ್ಥಿ ವಿಭಾಗ ರವರು ಮುಚ್ಚಿರುವ ಸತ್ಯಾಂಶವೆನೆಂದರೆ, ಈಗಾಗಲೇ ಎಚ್.ಎ.ಎಲ್ ನ ಮನವಿ ಮೆರೆಗೆ 1998ರಲೇ ನನ್ನ ಜಾತಿ ವಿಚಾರಣೆ ನಡೆಯಲಾಗಿ, ಜಿಲ್ಲಾ ಜಾತಿ ಪರಿಶೀಲನ ಸಮಿತಿ ರವರು ನನ್ನ ಜಾತಿ ಕೂಲಂಕುಶ ವಿಚಾರಣೆಯನ್ನು ನಡೆಸಿ ನನ್ನ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ದಿ:24.03.1998 ರಲೇ ನೀಡಲಾಯಿತು. ಸದರಿ ಪತ್ರ ಸ್ವೀಕರಿಸಿದ ನಂತರವೆ ದಿ: 11.07.1998 ರಲ್ಲಿ ಎಚ್.ಎ.ಎಲ್ ನವರು ನನಗೆ ನೇಮಕಾತಿ ಆದೇಶವನ್ನು ನೀಡಿರುತ್ತರೆ ಮತ್ತು ನನ್ನ ಸೇವ ಅವಧಿಯಲ್ಲಿ ನಾಲ್ಕು ಬಾರಿ ನನಗೆ ಬಡ್ತಿಯನ್ನು ನಿಡಿರುತ್ತರೆ. ನನ್ನ ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿ ಇನ್ನೂ ಎಚ್.ಎ.ಎಲ್ ನ ಆಧಿನದಲ್ಲೇ ಇದೆ.

ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯವೆನೆಂದರೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮಹಾ ವ್ಯವಸ್ಥಾಪಕರು ರವರು ದಾಖಲಿಸಿದ ಮೇಲಿರುವ ಸುಳ್ಳು ಮಾಹಿತಿಯು ನಿಯಾಮ 191 ಮತ್ತು 192 ರ ಅಡಿಯಲ್ಲಿ ಕ್ರಿಮಿನಲ್ ಅಪರಾದವಾಗಿದು ನಿಯಾಮ 193 ಇಂಡಿಯನ್ ಪೀನಲ್ ಕೋಡ (ಐ.ಪಿ.ಸಿ) ಅಡಿಯಲ್ಲಿ ಶಿಕ್ಷಾರ್ಹ ಅಪರಾದ.

**ದಿ:17.08.2015** ರಂದು ಮಾನ್ಯ ನ್ಯಾಯಲಯವು ಎರಡೂ ಪಾಟಿದಾರರ ವಿಚಾರಣೆ ಕೇಳಿ ಈಗಾಗಲೆ ಇತ್ಯರ್ಥಪಡಿಸಿರುವ ನ್ಯಾಯಾಲಯದ ಆದೇಶ ದಿ:06.02.2015ನ್ನು ಬದಲಾಯಿಸುವ ಅಥವ ವಿವರಿಸುವ ಅಗತ್ಯತೆ ಇರುವುದಿಲ್ಲ ಎಂದು ತಿಳಿಸಿ, ಎಚ್.ಎ.ಎಲ್ ಆಡಳಿತ ಮಂಡಳಿ ಸಲ್ಲಿಸಿದ ಮನವಿಯನ್ನು (IA) ನ್ನು ತಿರಿಸ್ಕರಿಸಿತು.

**ದಿ:03.09.2015** ರಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ನಾಗರೀಕ ಹಕ್ಕು ಜಾರಿ ನಿದೇಶನಾಲಯ ರವರು ಎಚ್.ಎ.ಎಲ್ ರವರಿಗೆ ಪತ್ರವನ್ನು ಬರೆದು ಸದರಿ ಪತ್ರದಲ್ಲಿ **"ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಪ್ರಾಧಿಕಾರದಿಂದ ನಡೆಸಲಾದ ಜಾತಿ ಪರಿಶೀಲನಾ ತನಿಖೆಯ ವರದಿಯ ಪ್ರಕಾರ ನನ್ನ ಕಿರಿಯ ಸಹೋದರನ್ನು ಪರಿಶಿಷ್ಟ ಜಾತಿ "ಆದಿ ದ್ರಾವಿಡ" ಜನಾಂಗಕ್ಕೆ ಸೇರಿದವರೆಂದು ತನಿಖೆಯನ್ನು ಮುಕ್ತಾಯಗೊಳಿಸಲಾಗಿದೆ"** ಎಂದು ಉಲ್ಲೇಖಿಸಿದೆ ಎಂದು ತಿಳಿಸಿರುತ್ತರೆ.

ದಿ: **04.09.2015** ರಂದು ಪೊಲೀಸ್ ಮಹಾ ನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಲಯ ರವರು ಎಚ್.ಎ.ಎಲ್ ರವರಿಗೆ ಪತ್ರವನ್ನು ಬರೆದು ಸದರಿ ಪತ್ರದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮಿತಿಯವರ ಕೋರಿಕೆ ಮೇರೆಗೆ ಪೊಲೀಸ್ ಉಪಾಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ತನಿಖೆ ಮಾಡಲಾಗಿ ತನೀಖೆಯ ವರದಿಯಲ್ಲಿ ಶ್ರೀ. ಆರ್ ಬಾಲ ಸರವಣ ಕುಮಾರ ರವರು ಪರಿಶಿಷ್ಟ ಜಾತಿ "ಆದಿದ್ರಾವಿಡ" ಜನಾಗಕ್ಕೆ ಸೇರಿದವರೆಂದು ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು WP 45128/2014 ಪ್ರಕರಣದ ಹಲವಾರು ವಿಚಾರಣೆಯ ನಂತರ, ಶ್ರೀ.ಆರ್.ಬಲ ಸರವಣಕುಮಾರ ಪರವಾಗಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು ಜಾರಿ ಮಾಡಲಾದ ಎಲ್ಲಾ ಆದೇಶಗಳನ್ನು ರದ್ದು ಪಡಿಸಿ ಶ್ರೀ.ಆರ್.ಬಲ ಸರವಣ ಕುಮಾರ ರವರ ಪರವಾಗಿ ಆದೇಶದಲ್ಲಿ ಉಲ್ಲೇಖಿಸಿರುತ್ತಾರೆ.

ಅದರಂತೆ, ತನಿಖಾ ವರದಿಯ ಆಧಾರದ ಮೇರೆಗೆ, ಶ್ರೀ.ಆರ್. **ಬಾಲ ಸರವಣ ಕುಮಾರ ರವರು ಪರಿಶಿಷ್ಟ ಜಾರಿ "ಆದಿದ್ರಾವಿಡ" ಜನಾಗಕ್ಕೆ ಸೇರಿರುವುದು ನಿರೂಪಿಸಲಾಗಿದೆ.** ಆದ್ದರಿಂದ ಶ್ರೀ.ಆರ್.ಬಾಲ ಸರವಣ ಕುಮಾರ ರವರ ಜಾತಿ ಪರಿಶೀಲನೆಯನ್ನು ಈ ಕಛೇರಿಯಲ್ಲಿ ಮುಕ್ತಾಯಗೊಳಿಸಲಾಗಿದೆ ಎಂದು ನಮೂದಿಸಲಾಗಿದೆ ಎಂದು ತಿಳಿಸಿರುತ್ತರೆ.

1) **1990** ರಲ್ಲೆ ಎಚ್.ಎ.ಎಲ್ ರವರ ಕೋರಿಕೆ ಮೆರೆಗೆ, ನನ್ನ ತಂದೆಯವರು **ಎಸ್.ಸಿ (ಆದಿ ದ್ರಾವಿಡ)** ಜನಾಂಗಕ್ಕೆ ಸೇರಿದವರೆಂದು ತಹಸಿಲ್ದಾರ್, ಬಂಗಾರಪೇಟೆ (ತಾ) ರವರಿಂದ ಪರಿಶೀಲಿಸಿ, ಜಿಲ್ಲಾದಿಕಾರಿಗಳು, ಕೋಲಾರ ರವರು ಜಾತಿ ಪರಿಶೀಲನಾ ವರದಿ ನೀಡಿರುವಾಗ,

2) ಪುನಃ **1993** ರಲ್ಲಿ ಎಚ್.ಎ.ಎಲ್ ರವರು 02 ನೇ ಬಾರಿಯ ಕೋರಿಕೆ ಮೆರೆಗೆ, ನನ್ನ ತಂದೆಯವರು **ಎಸ್.ಸಿ (ಆದಿ ದ್ರಾವಿಡ)** ಜನಾಂಗಕ್ಕೆ ಸೇರಿದವರೆಂದು ತಹಸಿಲ್ದಾರ್, ಬಂಗಾರಪೇಟೆ (ತಾ) ರವರಿಂದ ಪರಿಶೀಲಿಸಿ, ಜಿಲ್ಲಾದಿಕಾರಿಗಳು, ಕೋಲಾರ ರವರು ಜಾತಿ ಪರಿಶೀಲನಾ ವರದಿ ನೀಡಿರುವಾಗ,

3) **1994** ರಲ್ಲೆ ನಾನು **ಎಸ್.ಸಿ "ಆದಿದ್ರಾವಿಡ"** ಜಾತಿಗೆ ಸೇರಿದವನೆಂದು ತಹಸಿಲ್ದಾರ್ ಬೆಂಗಳೂರು (ದ) ರವರು ಅಗತ್ಯ ಪರಿಶೀಲನೆಯ ನಂತರ ನನಗೆ ಜಾತಿ ಪ್ರಮಾಣ ಪತ್ರ ನೀಡಿರುವಾಗ,

4) **1998** ರಲ್ಲಿ ಎಚ್.ಎ.ಎಲ್ ಕೋರಿಗೆಯ ಮೇರೆಗೆ, ಎಚ್.ಎ.ಎಲ್ ನಲ್ಲಿ ನೇಮಕಗೊಂಡ ಬಳಿಕ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು ನನ್ನ ಜಾತಿ ವಿಚಾರಣೆ ನಡೆಸಿ ನಾನು **ಎಸ್.ಸಿ "ಆದಿದ್ರಾವಿಡ"** ಜಾತಿಗೆ ಸೇರಿದವನೆಂದು ಒಪ್ಪಿ ನನಗೆ ಸಿಧುಂತ್ವ ಪ್ರಮಾಣ ಪತ್ರ ನೀಡಿರುವಾಗ,

5) **2015** ನೇ ಸಾಲಿನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ತೀರ್ಪಿನಲ್ಲಿ ನಾನು **ಎಸ್.ಸಿ " ಆದಿ ದ್ರಾವಿಡ"** ಜನಾಂಗಕ್ಕೆ ಸೇರಿದವನೆಂದು ಎತ್ತಿ ಹಿಡಿದು ಜಿ.ಜಾ.ಪ.ಸ ರವರ ಆದೇಶವನ್ನು ಹಾಗೂ ನನ್ನ ವಿರುದ್ಧದ ಎಲ್ಲಾ ಅಪರಾಧ ಪ್ರಕರಣಗಳನ್ನು ರದ್ದು ಪಡಿಸಿ ನನ್ನನ್ನು ಎಚ್.ಎ.ಎಲ್ ಸೇವೆಗೆ ಪುನಃ ನೇಮಕ ಮಾಡುವಂತೆ ಆದೇಶೀಸಿರವಾಗ,

6) ಅದೇ **2015** ನೇ ಸಾಲಿನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನಾನು ಎಸ್.ಸಿ "ಆದಿ ದ್ರಾವಿಡ" ಜನಾಂಗಕ್ಕೆ ಸೇರಿದವನೆಂದು ಎತ್ತಿ ಹಿಡಿದು ನನ್ನ ಹಿಂಬಾಕಿ ವೇತನವನ್ನು ನೀಡಲು ಆದೇಶಿಸಿರುವಾಗ,

7) ಅದೇ **2015** ನೇ ಸಾಲಿನಲ್ಲಿ ಮತ್ತೊಮ್ಮೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯದ ತೀರ್ಪಿನಲ್ಲಿ ನಾನು **ಎಸ್**.ಸಿ **"ಆದಿ ದ್ರಾವಿಡ"** ಜನಾಂಗಕ್ಕೆ ಸೇರಿದವನೆಂದು ಎತ್ತಿ ಹಿಡಿದು ಎಚ್.ಎ.ಎಲ್ ಸಲ್ಲಿಸಿದ IA ನ್ನು ರದ್ದು ಮಾಡಿರುವಾಗ,

8) **2015** ನೇ ಸಾಲಿನಲ್ಲಿ ನನ್ನನ್ನು ಸೇವೆಯಿಂದ ವಜಾ ಮಾಡಿದ ನಂತರ, ಪೊಲೀಸ್ ಇನ್ಸ್‌ಪೆಕ್ಟರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ರವರು ನನ್ನ ಕಿರಿಯ ಸಹೋದರನ ಜಾತಿ ಪರಿಶೀಲನಾ ಮಾಡಿ **ಎಸ್**.ಸಿ **"ಆದಿ ದ್ರಾವಿಡ"** ಜಾತಿ ಸೇರಿದವರೆಂದು ನಿರೂಪಿಸಿರುವಾಗ,

9) ಎಚ್.ಎ.ಎಲ್ ಸಂಸ್ಥೆಯವರು ನನ್ನನ್ನು ಸೇವೆಯಿಂದ ವಜಾ ಮಾಡಿದ ನಂತರ, ಪುನ: **2015** ನೇ ಸಾಲಿನಲ್ಲಿ, ಪೊಲೀಸ್ ಉಪಾಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ತುಮಕೂರು ರವರು ನನ್ನ ಜಾತಿ ಮರು ಪರಿಶೀಲನಾ ಮಾಡಿ "ನನ್ನ ತಂದೆ ಮತ್ತು ಅವರ ಮಕ್ಕಳು **ಎಸ್**.ಸಿ **"ಆದಿ ದ್ರಾವಿಡ"** ಜನಾಂಗಕ್ಕೆ ಸೇರಿದವರೆಂದು" ಮರು ಪರಿಶೀಲನಾ ವರದಿಯಲ್ಲಿ ನಮೂದಿಸಿರುವಾಗ,

2014 ನೇ ಸಾಲಿನಲ್ಲಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರು ಹಾಗೂ ಎಚ್.ಎ.ಎಲ್ ಆಡಳಿತ ಮಂಡಳಿಯವರು ಒಟ್ಟುಗೂಡಿ, ನಾನು ಎಸ್.ಸಿ ಜನಾಂಗಕ್ಕೆ ಸೇರಿದವನಲ್ಲ ಎಂಬ ತೀರ್ಮಾನಕ್ಕೆ ಬಂದು **ನನ್ನನ್ನು ಸೇವೆಯಿಂದ ವಜಾ ಮಾಡಿ, ಎರಡು ಬಾರಿ ಬಂಧಿಸಿ, ಸಾಮಾಜಿಕ, ಮಾನಸಿಕ, ದೈಹಿಕ ಹಿಂಸೆಗಳಿಗೆ ಗುರಿಪಡಿಸಿ, ನನ್ನ ಮತ್ತು ನನ್ನ ಕುಟುಂಬ ವರ್ಗದವರು ಹಣಕಾಸಿ ದುರ್ಲಬತೆಗೆ ಗುರಿಯಾಗುವಂತೆ ಮಾಡಿ, ಹಲವಾರು ಕಷ್ಟಗಳಿಗೆ ಅವಮಾನಕ್ಕೆ ಗುರಿ ಮಾಡಿದ್ದು ಯಾವ/ಯಾರ ಇಷ್ಟಾರ್ಥಕ್ಕೆ?**

**ಅದು**

ನಾನು **ಒಳ್ಳೆಯವನಾಗಿದ್ದು ಒಳಿತನ್ನು ಮಾಡಿದ್ದಕ್ಕ?**

# ಜಾತಿ ಪರಿಶೀಲನೆಯ ಪ್ರಕ್ರೀಯೆ

ಕೇಂದ್ರ / ರಾಜ್ಯ ಸರ್ಕಾರದ ನಿಯಮಾನುಸಾರ, ಸರ್ಕಾರದ ಹುದ್ದೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ "ಮೀಸಲಿಟ್ಟ ಹುದ್ದೆಗಳಿಗೆ" ಎಸ್.ಸಿ/ಎಸ್.ಟಿ/ಒ.ಬಿ.ಸಿ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ/ಪ್ರವೇಶ ಪಡೆಯುವ ಸಲುವಾಗಿ ಜಾತಿ ಪರಿಶೀಲನೆಯನ್ನು ಕೈಗೊಳ್ಳಲಗುತ್ತದೆ. ಇದು ಕೇವಲ ನಿಜವಾದ ಎಸ್.ಸಿ/ಎಸ್.ಟಿ/ಒ.ಬಿ.ಸಿ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಕಾನೂನಿನಲ್ಲಿ ನೀಡಲಾಗಿರುವ ಮೀಸಲಾತಿಯನ್ನು ಖಾತ್ರಿಪಡಿಸಿಕೊಳ್ಳಲು.

ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದ ನೈಜತೆಯ ಪರಿಶೀಲನೆಯನ್ನು ನೇಮಮಕಾತಿ ಅಥವಾ ಪ್ರವೇಶ ಪಡೆಯುವ ಪೂರ್ವಾನ್ವಯವೇ ಕಡ್ಡಾಯವಾಗಿ ಕೈಗೊಳ್ಳಬೇಕು. ಪ್ರಥಮ ಹಂತದಲ್ಲಿಯೇ ಪ್ರಾಧಿಕಾರದವರಿಗೆ ಅಭ್ಯರ್ಥಿಯ ಜಾತಿಯ ನೈಜತೆಯ ಕುರಿತು ಅನುಮಾನವಿದ್ದಲ್ಲಿ ಹಲವಾರು ಬಾರಿ ಕೂಲಂಕೂಷವಾಗಿ ಸಂಕ್ಷಿಪ್ತವಾಗಿ ಪರಿಶೀಲಿಸಲಿ, ಆದರೆ, ಒಮ್ಮೆ ಪರಿಶೀಲಿಸಿ, ದೃಡೀಕರಿಸಿರುವಾಗ ಮುಂದಿನ ದಿನಗಳಲ್ಲಿ ಮಾನ್ಯವಲ್ಲದ ದೂರುಗಳ ಆದಾರದ ಮೇರೆಗೆ ಸದರಿ ವ್ಯಕ್ತಿಗಳನ್ನು ದೋಷಿಸಿ ಹಿಂಸಿಸಬಾರದು. ಮುಂದುವರಿದು ಯಾರಾದರು ಬಾಧಿತ ವ್ಯಕ್ತಿಯು ಈಗಾಗಲೇ ಜಾತಿ ಸಿಂಧುತ್ವ ಪಡೆದಿರುವ ವ್ಯಕ್ತಿಯ ಮೇಲೆ ಅನುಮಾನವಿದಲ್ಲಿ ಅಂತಃ ವ್ಯಕ್ತಿಯ ಜಾತಿಯ ನೈಜ್ಯತೆ ಕುರಿತು ಮರು ಪರಿಶೀಲನೆ ಕೋರಿ ಆದಾರದೊಂದಿಗೆ ಮಾನ್ಯ ನ್ಯಾಯಾಲಯದ ಮೊರಿ ಹೋಗಬಹುದು.

ಗಮನಿಸ ಬೇಕಾದ ಅಂಶವೆನೆಂದರೆ ಈಗಾಗಲೇ ಅಧಿಕೃತ ಸಮಿತಿಯಿಂದ ಪರಿಶೀಲಿಸಿ, ಜಾರಿ ಮಾಡಲಾದ ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ದೃಡೀಕೃತ ಹೊಂದಿರುವ ವ್ಯಕ್ತಿಗಳ ಜಾತಿ ಮರು ಪರಿಶೀಲನೆ ಕೈಗೊಳ್ಳುವುದು ಅನಧೀಕೃತ ಮತ್ತು ನೇರವಾಗಿ, ಹಿಂಸೆಗೆ ಗುರುಪಡಿಸಿದಂತೆಯೇ. ಮಾನ್ಯ ಸರ್ವೂಚ್ಚ ನ್ಯಾಯಾಲಯ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳು ಮತ್ತು ಕರ್ನಾಟಕ ಎಸ್.ಸಿ/ಎಸ್.ಟಿ ಮತ್ತು ಒ.ಬಿ.ಸಿ (ನೇಮಕಾತಿಯಲ್ಲಿ ಮೀಸಲಾತಿ) ಕಾಯ್ದೆ 1990 ಮತ್ತು ನಿಯಮ 1992 ಗಳನ್ನು ಉಲ್ಲಂಘಿಸಿದಂತೆ.

ನಾಗರೀಕ ಹಕ್ಕು ಜಾರಿ ನಿದೇಶನಾಲಯ ಹಾಗೂ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯವರಿಗೂ ಈ ನಿಯಮದ ಕುರಿತು ಅರವಿದ್ದು ಸದರಿಯವರು "ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಿಂದ ಸಿಂಧುತ್ವ ಪ್ರಮಾಣಪತ್ರ ಪಡೆದ ಮರು ಪರಿಶೀಲಿಸುವ ಅಧಿಕಾರ ಹೊಂದಿರುವುದಿಲ" ಎಂದು ಉಲ್ಲೇಖ ಸಹ ಕೆಲವು ಪ್ರಕರಣಗಳಲ್ಲಿ ತಿಳಿಸಿರುತ್ತಾರೆ.

ಯಾವುದದರು ದೂರನ್ನು ಸ್ವೀಕರಿಸಿದಲ್ಲಿ ನಾಗರೀಕ ಹಕ್ಕು ಜಾರಿ ನಿದೇಶನಾಲಯನ ಅಧಿಕಾರಿಗಳು ಅವರು ಕೆಳ ಸಿಬ್ಬಂದಿಗಳಿಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ **ರೀಟ್ ಪಿಟಿಷನ್ ನಂ.18012/1989** ರೀತ್ಯಾ ಜಾತಿ ವಿಚಾರಣೆ ನಡೆಸಲು ಕೊರುವುದು ಸರಿ ಅಷ್ಟೆ. (ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕು.ಮಾಧುರಿ ಪಾಟೀಲ್ V/s ಹೆಚ್ಚುವರಿ ಆಯುಕ್ತರು 1995 AIR 94, 1994 SCC (6) 241 ದಿ:02.09.1994 ರಲ್ಲಿ ನೀಡಿರುವ ಸೂಚನಗಳೆ ರೀಟ್ ಪಿಟಿಷನ್ ನಂ. 18012/1989 ಪುನರುಚ್ಚರಿಸುತ್ತದೆ) ಅದರೆ ಪ್ರಾದಿಕಾದವರೆ ಸದರಿ ಸೂಚನೆಗಳ ವಿರುದ್ಧ ನೆಡೆಯುತ್ತರೆ.

ನನ್ನ 07 ತಿಂಗಳ ಅಗ್ನಿಪರೀಕ್ಷೆಯ ಪ್ರಕರಣದಲ್ಲಿರುವಾಗ ನಾನು ಬಹಳಷ್ಟು ವ್ಯಕ್ತಿಗಳು ಹಾಗೂ ನಿವೃತ್ತಿ ಹೊಂದಿರುವ ನಿವೃತ್ತಿಯ ಅಂಚಿನಲ್ಲಿರುವ ಕೆಲವು ಸರ್ಕಾರಿ ನೌಕರರ ಜಾತಿಯ ಮರು ಪರಿಶೀಲನೆಯ ಪ್ರಕರಣಗಳನ್ನು ತಿಳಿದಿರಿತ್ತೆನೆ.

ಈ ಮೇಲೆ ತಿಳಿಸಿರುವ ವ್ಯಕ್ತಿಗಳು ನೈಜವಾಗದಿದ್ದಲ್ಲಿ, ಸದರಿಯವರ ನೇಮಕಾತಿ/ಪ್ರವೇಶಾತಿ ಪ್ರಥಮ ಹಂತದಲ್ಲಿ ಜಾತಿ ವಿಚಾರಣೆ ಮಾಡಿ ಹಾಗೂ ಅವರಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ದ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕು ಅಥವಾ ಮೇಲೆ ತಿಳಿಸಿರುವ ವ್ಯಕ್ತಿಗಳ ಜಾತಿ ನೈಜವಾಗಿದ್ದಲ್ಲಿ ಈಗ ಪುನರ್ ಪರೀಶೀಲಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಇನ್ನೂ ಕಠಿಣವಾದ ಶಿಸ್ತಿನ ಕ್ರಮಕ್ಕೆ ಗುರಿಯಾಗಿಸಬೇಕು.

ನಾನೇ ಸ್ವಂತವಾಗಿ ಕಂಡಿರುವಂತೆ ಬಹಳಷ್ಟು ನೈಜ ವ್ಯಕ್ತಿಗಳು ನಾಗರೀಕರ ಹಕ್ಕು ಜಾರಿ ನಿರ್ದೇಶನಾಲಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳಲ್ಲಿರುವ ಕೆಲವು ಭ್ರಷ್ಟ ಅಧಿಕಾರಿಗಳು ನಡೆಸುತ್ತಿರುವ "ಜಾತಿ ಮರು ಪರಿಶೀಲನೆ" ಎಂಬ ಅಕ್ರಮ ಹಗರಣದ ಬಲೆಯಲ್ಲಿ ಪ್ರಸ್ಥುತ ಸಿಲುಕೆ ನರಳಿ ನಲುಗುತ್ತಿದ್ದರೆ. ರಾಜ್ಯ ಸರ್ಕಾರದ ಈ ಎರಡು ಜವಾಬ್ದಾರಿಯುತ ಇಲಾಖೆಗಳ ಕೆಲವು ಭ್ರಷ್ಟ ಅಧಿಕಾರಿಗಳು ಕಾನೂನನ್ನು ತೀರಾ ಅಲಕ್ಷ್ಯ ಮತ್ತು ಅಗೌರವ ತೊರಿ ಪ್ರತ್ಯಕ ಸರ್ಕಾರವನ್ನು ನಡೆಸುತ್ತಿದರೆ ಮತ್ತು ತಮ್ಮ ಘನತೆವೆತ್ತ ಇಲಾಖೆ ಹಾಗೂ ಅಧಿಕೃತ ಸ್ಥಾನವನ್ನು ಯಾರದ್ದೋ ಇಚ್ಚೇಗಾಗಿ ಯಾರದ್ದೋ ಒಳಿತಿಗಾಗಿ ಪ್ರಾಯಶಃ ಹಣಕಾಸಿನ ಲಾಭಕ್ಕಾಗಿ ದುರುಪಯೋಗ ಮಾಡುತ್ತಿದ್ದಾರೆ.

ಯಾವುದಾದರೂ ಪಟ್ಟಭದ್ರ ಹಿತಾಸಕ್ತಿ ಹೊಂದಿದ ವ್ಯಕ್ತಿಯು ಯಾವುದದರು ಜಾತಿ ಪರಿಶೀಲಿತ ವ್ಯಕ್ತಿಯ ಮೇಲೆ ತನ್ನ ಕ್ಷುಲ್ಲಕ ಇಚ್ಚೆಗಾಗಿ ತನ್ನ ಕೋಪ ತೀರಿಸಿಕೊಳ್ಳುವುದಕ್ಕಾಗಿ ಈ ಭ್ರಷ್ಟ ಅಧೀಕಾರಿಗಳೊಂದಿಗೆ ಸೇರಿ, ಲಿಖಿತ ದೂರು ನೀಡಿದಲ್ಲಿ ಈ ಅಧಿಕಾರಿಗಳು ಅಧಿಕಾರ ಮತ್ತು ವ್ಯಾಪ್ತಿ ಮೀರಿ ಜಾತಿ ಮರು ಪರಿಶೀಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ತದನಂತರ ತಪ್ಪು ವರದಿ ನೀಡುತ್ತಾರೆ. ಅದು ಕೇವಲ, ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಬಹುದಾಗಿದೆ. ಈ ಭ್ರಷ್ಟ ಅಧಿಕಾರಿಗಳು ಅನಾಮಧೇಯ ದೂರಿಗೂ ಸಹ ಉತ್ತೇಜನ ನೀಡಿ, ಜಾತಿಯ ಮರು ಪರಿಶೀಲನೆ ಕೈಗೊಳ್ಳುತ್ತಾರೆ.

ಇನ್ನೂ ಕೆಲವು ಪ್ರಕರಣಗಳಲ್ಲಿ ಅಮಾಯಕ ನೈಜ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರು ಮತ್ತು ಅವರ ಕುಟುಂಬದವರನ್ನು ಸುಮಾರು ತಿಂಗಳು/ವರ್ಷಗಳ ಕಾಲ ಮಾನಸಿಕ ಒತ್ತಡ/ಹಿಂಸೆಗೆ ಗುರಿಯಾಗಿಸಿ, ಕೊನೆಯಲ್ಲಿ ಅವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕ್ಕೆ ಸೇರಿದವರೆಂದು ವರದಿ ನೀಡುತ್ತಾರೆ.

ನಾನು ನನ್ನ ಕುಟುಂಬ ವರ್ಗದವರು ಅನೇಕ ಕಷ್ಟ, ಅವಮಾನ, ಅಪಯ, ತೊಂದರೆ, ಹಣಕಾಸಿನ ದುರ್ಲಬತೆ, ಮಾನಸಿಕ ಮತ್ತು ಭೌತಿಕ ಒತ್ತಡ ಹಿಂಸೆ ಅನುಭವಿಸಿದ ನಂತರ, ನನಗೆ ಉಳಿದಿದು ಕೇವಲ ಎರಡೆ ಆಯ್ಕೆಗಳು.

**ಈ ಭ್ರಷ್ಟ ವ್ಯವಸ್ಥೆಯನ್ನು ನನ್ನ ಕರ್ಮವೆಂದು ಒಪ್ಪಿಕೊಳ್ಳಲೇ?**

**ಅಥವಾ**

**ಈ ಭ್ರಷ್ಟ ವ್ಯವಸ್ಥೆಯನ್ನು ಬಹಿರಂಗಪಡಿಸಿ ಹೋರಾಡಲೇ?**

ನಾನು ಅನುಭವಿಸಿದ ಚಿತ್ರಹಿಂಸೆಯನ್ನು ಜಾತಿ ಮರು ಪರಿಶೀಲನೆಯಲ್ಲಿ ಸಿಲುಕಿರುವ ನೈಜ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನಿರಾಪರಾದಿಗಳು ಮತ್ತು ಅವರ ಕುಟುಂಬದವರನ್ನು ಅನುಭವಿಸಬಾರದು ಎಂಬ ಏಕೈಕ ಕಾರಣಕ್ಕಾಗಿ, ನಾನು ಈ ಭ್ರಷ್ಟ ವ್ಯವಸ್ಥೆಯನ್ನು ಬಹಿರಂಗಪಡಿಸಿ ಮತ್ತು ಈ ವ್ಯವಸ್ಥೆ ವಿರುದ್ದ ಹೋರಾಡುವುದಕ್ಕೆ ನಿರ್ಧರಿಸಿದ್ದೇನೆ.

ಆದ್ದರಿಂದ, ಎಲ್ಲಾ ನೈಜ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಈಗಾಗಲೇ ನಿಯಮಾನುಸಾರ ಜಾತಿ ವಿಚಾರಣೆ ನಡೆದು ದೃಡಪಟು ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದು ಈಗ ನಿಷ್ಪ್ರಯೋಜಕ ದೂರಿನ ಮೇರೆಗೆ ಜಾತಿಯ ಮರು ಪರಿಶೀಲನೆ ಎಂಬ ಹಗರಣದ ಬಲೆಯಲ್ಲಿ ಹಾಗೂ ಭ್ರಷ್ಟ ವ್ಯವಸ್ಥೆಯಲ್ಲಿ ಸಿಲುಕಿರುವವರು ಒಂದು ಗೂಡಿ ಒಂದು ಸಾಮಾಜಿಕ ವೇದಿಕೆಯನ್ನು ಸೃಷ್ಟಿಸಿಲು ಹಾಗೂ ಈ ಸಮಾಜದ ಭೂತದ ವಿರುದ್ಧ ಹೋರಾಡಲು ನನ್ನನ್ನು ಸಂಪರ್ಕಿಸಬಹುದು.

ಅಂತಿಮವಾಗಿ ಈ ಭ್ರಷ್ಟಚಾರದ, ಅನ್ಯಾಯದ ವಿರುದ್ದ ಹೋರಾಡಲು ಮತ್ತು ದೌರ್ಜನ್ಯವನ್ನು ಸದೆಬಡೆಯಲು ಮುಂದೆ ಬರುವ ಪ್ರಮಾಣಿಕ ಮತ್ತು ಧೈರ್ಯವಂತ ವ್ಯಕ್ತಿಗಳಿಗೆ ನಾನು ಅನುಭವಿಸಿದ ಹಾಗೆ ಹಿಂಸೆಯನ್ನು ಪಟ್ಟಭದ್ರ ಹಿತಾಸಕ್ತಿ ಹೊಂದಿರುವವರು ನೀಡಿದರೆ, ಈ ಭ್ರಷ್ಟಚಾರ, ಅನ್ಯಾಯದ ವಿರುದ್ದ ಹೋರಾಡಲು ಮತ್ತು ದೌರ್ಜನ್ಯವನ್ನು ಸದೆಬಡೆಯಲು ಯಾರು ಮುಂದೆ ಬರುತ್ತರೆ ಮತ್ತು ನಮ್ಮ ದೇಶ ಮುಂದುವರೆಯುವುದು/ಬೆಳೆಯುವುದು/ಅಭಿವೃದ್ದಿಯಾಗುವುದು ಹೇಗೆ ಹಾಗೂ ದೀನರ ಸುಧಾರಣೆ ಹೇಗೆ?

ಆದರೂ ಸಹ ಸಮಸ್ತ ನಾಗರೀಕರನ್ನು ನಾನು ಕಳಕಳೀಯಾಗಿ ಕೋರುವುದೇನೆಂದರೆ ಯಾವುದದರು ಅನ್ಯಾಯ ಕಂಡಗ ನಿಮ್ಮ ಕರುಣೆಯನ್ನು ಫೇಸ್ಬುಕ್, ಟ್ವೀಟರ್, ವ್ಯಾಟ್ಸಪ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಮರು ಹಂಚುವ ಹಾಗೂ ಜಾಗ್ರತೆಗಾಗಿ ಮೋಬತ್ತಿಯನ್ನು ಹಿಡಿದು ಮೌನ ಸಲ್ಲಿಸುವ ಬದಲು ಮುಂದೆ ಬಂದು ನೀವು ಗಮನಿಸಿರುವ ಅನ್ಯಾಯ ಮತ್ತು ಭ್ರಷ್ಟಚಾರದ ವಿರುದ್ಧ ದೈರ್ಯವಾಗಿ ಧ್ವನಿ ಎತ್ತಿ ಹೋರಾಡಿ. ಈ ಅನ್ಯಾಯ ಮತ್ತು ಭ್ರಷ್ಟಚಾರದ ವಿರುದ್ದ ಇನ್ನೊಬ್ಬರು ಹೋರಾಡುತ್ತಿರುವಾಗ ನೀವು ಕೈ ಜೋಡಿಸದ್ದದರೆ ನಾಳೆ ನೀವು ಇದೆ ಸಮಸ್ಯೆಯಲ್ಲಿದ್ದಾಗ ನೀಮ್ಮ ಜೋತೆ ಯಾರು ನೀಲುವುದ್ದಿಲ್ಲ!!! ಪ್ರತಿಯೊಬ್ಬರು ಈ ಸಮಸ್ಯಯನ್ನು ಒಂದಲ್ಲ ಒಂದೊಮ್ಮೆ ಎದುರಿಸಲೇ ಬೇಕು.

**“ ಪ್ರಪಂಚವು ಬಹಳಷ್ಟು ನರಳುತ್ತಿರುವುದು, ಕೆಟ್ಟ ಜನರ ಹಿಂಸಾಚಾರದಿಂದ ಅಲ್ಲ, ಆದರೆ ಉತ್ತಮ ಜನರ ಮೌನದಿಂದಾಗಿ ”**

**ನೇಪೋಲಿಯನ್**

ನೀವು ಅನುಭವಿಸುತ್ತಿರುವ ಸಮಸ್ಯೆಗಳನ್ನು ಯರೋ ಬಂದು ಬಗೆಹರಿಸುತ್ತಾರೆಂದ ಬಯಸಬೇಡಿ, ಪ್ರಪಂಚದಲ್ಲಿ ಬದಲಾವಣೆಗೆ ಮುಂದಾಗಿ ಆದ್ದರಿಂದ ನಿಮ್ಮ ಸೌಕರ್ಯದ ವಲಯವನ್ನು ತೊರೆದು ನಿಮ್ಮ ಮತ್ತು ನಿಮ್ಮ ಮಕ್ಕಳ ಭವಿಷ್ಯ ಮತ್ತು ನಮ್ಮ ಅದ್ಭುತ ದೇಶಕ್ಕಾಗಿ ಹೋರಾಡಿ.

**ಈ ಕುರಿತು ನನಗೆ ಮತ್ತು/ಅಥವ ನನ್ನ ಕುಟುಂಬದವರಿಗೆ ಯಾವುದೇ ರಕ್ಷಣೆಯ ಬೇಡ, ಆದರೆ ನನಗಾಗಲೀ ಮತ್ತು/ಅಥವ ನನ್ನ ಕುಟುಂಬದವರಿಗಾಗಲೀ ಈ ಬಗ್ಗೆ ನೋವು ಅಥವ ಹಿಂಸೆ ನೀಡಿ ಹಾಗೂ ನನ್ನ ಮತ್ತು/ಅಥವ ನನ್ನ ಕುಟುಂಬದವರ ವಿರುದ್ಧ ದಹಿಸಿ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದಲ್ಲಿ ಮೇಲೆ ಪ್ರಸ್ತಾಪಿಸಲಾದ ಎಲ್ಲಾ ವ್ಯಕ್ತಿಗಳೇ ನೇರ ಕಾರಣರಾಗಿರುತ್ತಾರೆ.**


**ಆರ್. ಬಾಲ ಸರವಣ ಕುಮಾರ,**

ಪ್ರಧಾನ ಕಾರ್ಯದರ್ಶಿ

ಎಚ್.ಎ.ಎಲ್ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಸಂಘ

ಎಚ್.ಎ.ಎಲ್,

ಬೆಂಗಳೂರು

**ಮೋ. ಸಂ: 9886750405**

ಇ ಮೇಲ್: **halscstbala@gmail.com**

ಹೋರಾಟ

ಇನ್ನೂ

ಮುಂದುವರಿಯುತ್ತಿದೆ.......

ಧನ್ಯವಾದಗಳು